26 May 2026 Tuesday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಸತ್ಯವು ಯಾವಾಗಲೂ
ಒಂಟಿಯೇ,ಆದರೆ ಸುಳ್ಳಿಗೆ
ಮಾತ್ರ ನೆಂಟರ ಕೊರತೆ ಇಲ್ಲ!
ಸ್ನೇಹಾ ಆನಂದ್

info.varthaman@gmail.com



ಮತದಾರರ ಜಾಗೃತಿಗೆ ಕಾಂಗ್ರೆಸ್ ಪಣ — ಪುಟ ಸಂ. 2



ನಾಗಮಲೆಯಲ್ಲಿ ಮತ್ತೆ ಚಿರತೆ ದಾಳಿ; ಬೆಚ್ಚಿದ ಜನರು — ಪುಟ ಸಂ. 2



ಜೈವಿಕ ವೈವಿಧ್ಯ ಸಂರಕ್ಷಣೆಗೆ ಪ್ರತಿಯೊಬ್ಬರ ಪಾತ್ರ ಅಗತ್ಯ: ಅನಂತರಾಮು — ಪುಟ ಸಂ. 2


9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 180 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

## ಇನ್ನೂ 4 ದಿನ ಮಳೆ

**ಬೆಂಗಳೂರು:** ಬೆಂಗಳೂರು ಸೇರಿದಂತೆ ರಾಜ್ಯದ ಹಲವೆಡೆ ಮುಂದಿನ ಕೆಲ ದಿನಗಳ ಕಾಲ ಮಳೆ ಆರ್ಭಟ ಮುಂದುವರಿಯುವ ಸಾಧ್ಯತೆ ಇದೆ. ಮೇ 29ರವರೆಗೆ ಐಎಂಡಿ ಯೆಲ್ಲೋ ಅಲರ್ಟ್ ಘೋಷಿಸಿದೆ.

ನಗರದಲ್ಲಿ ವಾರಪೂರ್ತಿ ಹಗುರದಿಂದ ಮಧ್ಯಮ ಮಳೆ ಮತ್ತು ಗುಡುಗು ಸಹಿತ ಮಳೆಯಾಗುವ ಮುನ್ಸೂಚನೆ ನೀಡಲಾಗಿದೆ.



ಐಎಂಡಿ ಮಾಹಿತಿ ಪ್ರಕಾರ, ಬಂಗಾಳಕೊಲ್ಲಿಯ ನೈಋತ್ಯ ಮತ್ತು ಪಕ್ಕದ ಪ್ರದೇಶಗಳಲ್ಲಿ ಮೇಲ್ಮುಖ ವಾಯು ಚಂಡಮಾರುತದ ಪ್ರಸರಣ ಉಂಟಾಗುವುದರಿಂದ ರಾಜ್ಯದಲ್ಲಿ ಮಳೆ ಹೆಚ್ಚಾಗಲಿದೆ. ಈ ಹವಾಮಾನ ವ್ಯವಸ್ಥೆಯಿಂದ ಬೆಂಗಳೂರು ಸೇರಿದಂತೆ ರಾಜ್ಯದ ಹಲವೆಡೆ ವ್ಯಾಪಕ ಮಳೆಯಾಗುವ ಸಾಧ್ಯತೆ ಇದೆ. ಬೆಂಗಳೂರು ಮಾತ್ರವಲ್ಲದೆ ಉತ್ತರ ಒಳನಾಡು, ದಕ್ಷಿಣ ಒಳನಾಡು ಹಾಗೂ ಕರಾವಳಿ ಕರ್ನಾಟಕದ ಬಹುತೇಕ ಜಿಲ್ಲೆಗಳಿಗೂ ಮೇ 29ರವರೆಗೆ ಯೆಲ್ಲೋ ಅಲರ್ಟ್ ಮುಂದುವರಿಯಲಿದೆ ಹವಾಮಾನ ಇಲಾಖೆ ತಿಳಿಸಿದೆ.

## 11 ಮಂದಿ ಜಲಸಮಾಧಿ: ಸಾಮೂಹಿಕ ಅಂತ್ಯಸಂಸ್ಕಾರ

**ಕಾರವಾರ:** ಕಪ್ಪೆಚಿಪ್ಪು ತೆಗೆಯಲು ಹೋಗಿ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದ 11 ಮಂದಿಯ ಸಾಮೂಹಿಕ ಅಂತ್ಯಸಂಸ್ಕಾರ ಭಟ್ಕಳದ ಶಾರದಾಹೊಳೆಯಲ್ಲಿ ಸೋಮವಾರ ನೆರವೇರಿತು.

ಮೃತ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತ್ತು. ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳು ವೈದ್ಯ ಅಂತಿಮ ದರ್ಶನ ಪಡೆದು, ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.

ಬಳಿಕ ಮಾತನಾಡಿದ ಅವರು, ಭಟ್ಕಳದ ಇತಿಹಾಸದಲ್ಲಿ ಇಂತಹ ದುರಂತ ನಡೆದಿರಲಿಲ್ಲ. ಏಪ್ರಿಲ್–ಮೇ ತಿಂಗಳಲ್ಲಿ ಕಪ್ಪೆ ಚಿಪ್ಪು ತೆಗೆಯುವುದು ಸಾಮಾನ್ಯ. ಆದರೆ ಈ ದುರ್ಘಟನೆಗೆ ನಿಖರ ಕಾರಣ ಇನ್ನೂ ತಿಳಿದುಬಂದಿಲ್ಲ. ಕಾರಣ ಪತ್ತೆ ಮಾಡಲು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ ಎಂದರು.

ಮೃತರ ಕುಟುಂಬಗಳಿಗೆ ಸರ್ಕಾರದ ನೆರವು ನೀಡಲಾಗುವುದು. ಚಿಕಿತ್ಸೆ ಪಡೆಯುತ್ತಿರುವವರ ವೈದ್ಯಕೀಯ ವೆಚ್ಚವನ್ನು ನಾನೇ ಭರಿಸುತ್ತೇನೆ. ಜೊತೆಗೆ ಮೃತರ ಮಕ್ಕಳ ಶಿಕ್ಷಣಕ್ಕೆ ಅಗತ್ಯ ನೆರವು ನೀಡಲು ಸಿದ್ಧನಿದ್ದೇನೆ ಎಂದು ಭರವಸೆ ನೀಡಿದರು.

## ಜಿಲೆಟಿನ್ ಕಡ್ಡಿಗಳು ಪತ್ತೆ: 6 ಪೊಲೀಸರ ಅಮಾನತು

**ಬೆಂಗಳೂರು:** ಪ್ರಧಾನಿ ನರೇಂದ್ರ ಮೋದಿ ಮೇ 10ರಂದು ನಗರದ ಹೊರವಲಯದ ಆರ್ಟ್ ಆಫ್ ಲಿವಿಂಗ್ ಕೇಂದ್ರಕ್ಕೆ ಭೇಟಿ ನೀಡುವುದಕ್ಕೂ ಮುನ್ನ ಆ ಮಾರ್ಗದಲ್ಲಿ ಎರಡು ಜಿಲೆಟಿನ್ ಕಡ್ಡಿಗಳು ಪತ್ತೆಯಾದ ಪ್ರಕರಣದಲ್ಲಿ ಕರ್ತವ್ಯ ಲೋಪದ ಆರೋಪದ ಮೇಲೆ ಆರು ಪೊಲೀಸರನ್ನು ಅಮಾನತುಗೊಳಿಸಲಾಗಿದೆ.

ಒಬ್ಬ ಸಬ್ ಇನ್ಸ್‌ಪೆಕ್ಟರ್, 1 ಎಎಸ್ಐ ಮತ್ತು ನಾಲ್ವರು ಕಾನ್‌ಸ್ಟೆಬಲ್‌ಗಳನ್ನು ಬೆಂಗಳೂರು ದಕ್ಷಿಣ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಶ್ರೀನಿವಾಸ್ ಗೌಡ ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ.

ಕಗ್ಗಲಿಪುರ ಪೊಲೀಸ್ ಠಾಣೆ ವ್ಯಾಪ್ತಿಯ ತಾತಗುಣಿ ಬಳಿ, ಪ್ರಧಾನಿ ಮೋದಿ ತೆರಳುವ ಮಾರ್ಗದ ಸ್ವಲ್ಪ ದೂರದಲ್ಲಿ, ನಿಯಮಿತ ಭದ್ರತಾ ತಪಾಸಣೆ ಸಮಯದಲ್ಲಿ ಸರ್ಕ್ಯೂಟ್ ಮತ್ತು ಟೈಮರ್ ಹೊಂದಿರುವ ಜಿಲೆಟಿನ್ ಕಡ್ಡಿಗಳು ಪತ್ತೆಯಾಗಿದ್ದವು. ನಂತರ, ರಾಷ್ಟ್ರೀಯ ತನಿಖಾ ಸಂಸ್ಥೆ ಕಾರ್ಯಪ್ರವೃತ್ತವಾಗಿ ತನಿಖೆಯನ್ನು ಕೈಗೆತ್ತಿಕೊಂಡಿತ್ತು.

## ರಾಜ್ಯದಲ್ಲಿ ಬಿಜೆಪಿಗೆ ಸಹಕಾರ: ಎಚ್‌ಡಿಕೆ

**ಬೆಂಗಳೂರು:** ಮೈತ್ರಿಪಕ್ಷ ಬಿಜೆಪಿಯ ರಾಷ್ಟ್ರಾಧ್ಯಕ್ಷ ನಿತಿನ್ ನಬಿನ್ ಅವರು ಬೆಂಗಳೂರಿಗೆ ಬಂದಿದ್ದಾರೆ. ರಾಜ್ಯದಲ್ಲಿ ಬಿಜೆಪಿಯನ್ನು ಸದೃಢಗೊಳಿಸುವ ನಿಟ್ಟಿನಲ್ಲಿ ಕಾರ್ಯತಂತ್ರ ರೂಪಿಸುತ್ತಿದ್ದಾರೆ ಎಂದು ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಹೇಳಿದರು.



ಬೆಂಗಳೂರಿನಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ರಾಜ್ಯದ ಬಿಜೆಪಿ ನಾಯಕರೊಂದಿಗೆ ಸಭೆ ನಡೆಸಿದ್ದಾರೆ. ಕೋರ್ ಕಮಿಟಿ ಸಭೆ ಕೂಡ ನಡೆಸಿದ್ದಾರೆ. ನಾವು ಬಿಜೆಪಿಯವರ ಜೊತೆ ಕೈಜೋಡಿಸಿ ಪರಸ್ಪರ ಸಹಮತದಿಂದ ಕರ್ನಾಟಕದಲ್ಲಿ ಮುಂದಿನ ಬಾರಿ 2028ರಲ್ಲಿ ಅಧಿಕಾರಕ್ಕೆ ಬರಲು ಪ್ರಯತ್ನಿಸುತ್ತೇವೆ ಎಂದು ತಿಳಿಸಿದರು.

ಬಿಜೆಪಿ ರಾಷ್ಟ್ರಾಧ್ಯಕ್ಷರಿಗೆ ಕರ್ನಾಟಕದಲ್ಲಿ ನಮ್ಮ ಮತ್ತು ಬಿಜೆಪಿ ಪಕ್ಷವನ್ನು ಬಲಪಡಿಸಲು ಎಲ್ಲಾ ರೀತಿಯ ಸಹಕಾರ ನೀಡುತ್ತೇವೆ ಎಂದರು.

# ಹೈಕಮ್ಯಾಂಡ್ 'ಗೌಪ್ಯ ಅಜೆಂಡಾ'!

## ಮುಖ್ಯಮಂತ್ರಿ ಸ್ಥಾನದ ಕುರಿತು ಇಂದು ನಿರ್ಧಾರ ಸಾಧ್ಯತೆ

**ಬೆಂಗಳೂರು:** ಕಾಂಗ್ರೆಸ್ ಹೈಕಮಾಂಡ್ ಮೇ 26ರಂದು ದೆಹಲಿಗೆ ಬರುವಂತೆ ನನ್ನನ್ನು ಆಹ್ವಾನಿಸಿದೆ. ನಾನು ಹೋಗುತ್ತಿದ್ದೇನೆ. ಆದರೆ ಹೈಕಮಾಂಡ್ ಮಟ್ಟದ ಸಭೆಯ ಅಜೆಂಡಾ ಏನು ಎಂಬುದು ತಮಗೆ ತಿಳಿದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಮಾಧ್ಯಮಗಳ ಜೊತೆ ಸೋಮವಾರ ಮಾತನಾಡಿದ ಅವರು, ನನ್ನನ್ನು ದೆಹಲಿಗೆ ಆಹ್ವಾನಿಸಿರುವುದು ನಿಜ. ಹೈಕಮಾಂಡ್ ಜೊತೆ ನಾಳೆ ಬೆಳಗ್ಗೆ 11 ಗಂಟೆಗೆ ದೆಹಲಿಯಲ್ಲಿ ಸಭೆ ಆಯೋಜಿಸಲಾಗಿದೆ. ವಿಷಯ ಏನು ಎಂಬ ಬಗ್ಗೆ ತಿಳಿಸಿಲ್ಲ. ನಿನ್ನೆ ರಾತ್ರಿ ಕೆ.ಸಿ ವೇಣುಗೋಪಾಲ್ ಕರೆ ಮಾಡಿ ದಿನಾಂಕ ಹಾಗೂ ಸಭೆಯ ಬಗ್ಗೆ ಮಾಹಿತಿ ನೀಡಿದರು ಎಂದು ಸಿದ್ದರಾಮಯ್ಯ ಮಾಹಿತಿ ನೀಡಿದರು.

ಸರ್ಕಾರ ಮೂರು ವರ್ಷ ಪೂರೈಸಿರುವ ಹಿನ್ನೆಲೆಯಲ್ಲಿ, ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಹಾಗೂ ಸಚಿವ ಸಂಪುಟ ಪುನಾರಚನೆ ಕುರಿತು ಊಹಾಪೋಹಗಳು ಜೋರಾಗಿವೆ. ಈ ನಡುವೆ ಉಪ ಮುಖ್ಯಮಂತ್ರಿ ಡಿ.ಕೆ ಸುದ್ದಿಗಾರರೊಂದಿಗೆ ಮಾತನಾಡಿ, ನನ್ನನ್ನು ಹೈಕಮಾಂಡ್ ದೆಹಲಿಗೆ ಕರೆದರೆ ನಾನು ಹೋಗುತ್ತೇನೆ ಎಂದಿದ್ದಾರೆ.

ಸಿದ್ದರಾಮಯ್ಯ ಅವರು ಸಚಿವ ಸಂಪುಟ ಪುನಾರಚನೆಗೆ ಒಲವು ತೋರಿದ್ದರೆ, ಡಿ ಕೆ ಶಿವಕುಮಾರ್ ಮೊದಲು ನಾಯಕತ್ವ ಬದಲಾವಣೆ ಕುರಿತು ಪಕ್ಷ ಸ್ಪಷ್ಟ ನಿರ್ಧಾರ ಕೈಗೊಳ್ಳಬೇಕು ಎಂದು ಬಯಸುತ್ತಿದ್ದಾರೆ. ಕಾಂಗ್ರೆಸ್ ಹೈಕಮಾಂಡ್ ಸಚಿವ ಸಂಪುಟ ಪುನಾರಚನೆಗೆ ಅನುಮೋದನೆ ನೀಡಿದರೆ, ಸಿದ್ದರಾಮಯ್ಯ ಪೂರ್ಣ ಐದು ವರ್ಷದ ಅವಧಿ ಮುಂದುವರಿಯಲಿದ್ದಾರೆ ಎಂಬ ಸ್ಪಷ್ಟ ಸಂದೇಶ ಸಿಗಲಿದೆ. ಇದರಿಂದ ಡಿ.ಕೆ ಶಿವಕುಮಾರ್ ಮುಖ್ಯಮಂತ್ರಿ ಹುದ್ದೆ ಅಲಂಕರಿಸುವ ಸಾಧ್ಯತೆ ಕ್ಷೀಣವಾಗಬಹುದು.

2023ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿದ ವೇಳೆ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ನಡುವೆ ಅಧಿಕಾರ ಹಂಚಿಕೆ ಕುರಿತ ಒಪ್ಪಂದವಾಗಿದೆ ಎಂಬ ವರದಿಗಳ ಹಿನ್ನೆಲೆಯಲ್ಲಿ, ಡಿ.ಕೆ.ಶಿವಕುಮಾರ್ ಬೆಂಬಲಿಗರು ಅವರಿಗೆ ಮುಖ್ಯಮಂತ್ರಿ ಸ್ಥಾನ ನೀಡಬೇಕೆಂದು ಒತ್ತಾಯಿಸುತ್ತಿದ್ದಾರೆ.

ಸಿದ್ದರಾಮಯ್ಯ ಅವರು ತಾವು ಪೂರ್ಣ ಐದು ವರ್ಷದ ಅವಧಿಯನ್ನು ಪೂರ್ಣಗೊಳಿಸುವುದಾಗಿ ಈಗಾಗಲೇ ಹೇಳಿದ್ದಾರೆ. ಜೊತೆಗೆ, ಹೈಕಮಾಂಡ್ ನಿರ್ಧಾರವನ್ನು ಪಾಲಿಸುವುದಾಗಿ ಮತ್ತು ಪಕ್ಷ ಕರೆದರೆ ದೆಹಲಿಗೆ ಪುಟ 2ಕ್ಕೆ



### ನನಗೂ ಏನೂ ಗೊತ್ತಿಲ್ಲ!: ಡಿಕೆಶಿ

**ಬೆಂಗಳೂರು:** ಹೈಕಮಾಂಡ್ ಸಿಎಂ ಅವರನ್ನು ಕರೆದಿರುವ ಬಗ್ಗೆ ನನಗೆ ಏನೂ ಗೊತ್ತಿಲ್ಲ, ಯಾಕೆ ಕರೆದಿದ್ದಾರೆ ಎಂಬುದು ಸಹ ತಮಗೆ ತಿಳಿದಿಲ್ಲ ಎಂದು ಡಿ.ಕೆ.ಶಿವಕುಮಾರ್ ತಿಳಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಹೈಕಮಾಂಡ್ ಬುಲಾವ್ ಕುರಿತು ಡಿಸಿಎಂ ಡಿ.ಕೆ.ಶಿವಕುಮಾರ್ ಪ್ರತಿಕ್ರಿಯೆ ನೀಡಿದ ಅವರು, ಈ ಬಗ್ಗೆ ಸಿಎಂ ನನಗೆ ಏನೂ ಹೇಳಿಲ್ಲ. ಅಲ್ಲದೆ, ಹೈಕಮಾಂಡ್‌ನಿಂದ ಸಹ ತಮಗೆ ಕರೆ ಬಂದಿಲ್ಲ. ಕರೆದರೆ ಹೋಗುತ್ತೇನೆ ಎಂದರು. ಪುಟ 2ಕ್ಕೆ

### ಬರೆದಿಟ್ಕೊಳ್ಳಿ 2028ಕ್ಕೆ ಇದೇ ಡಿಕೆಶಿ ಸರ್ಕಾರ!

**ಬೆಂಗಳೂರು:** ನೀವು ಇಂದೇ ಪೇಪರ್ ನಲ್ಲಿ ಬರೆದಿಟ್ಕೊಳ್ಳಿ!. ಮುಂದೇನು ನಮ್ದೇ ಸರ್ಕಾರ. 'ಇದೇ ಡಿ.ಕೆ.ಶಿವಕುಮಾರ್, ಇದೇ ಕಾಂಗ್ರೆಸ್ ಸರ್ಕಾರ' ಇರುತ್ತದೆ ಎಂದು ಡಿ.ಕೆ.ಶಿವಕುಮಾರ್ ತಿರುಗೇಟು ನೀಡಿದ್ದಾರೆ.

ಕೆಪಿಸಿಸಿ ಕಚೇರಿಯಲ್ಲಿ ಸೋಮವಾರ ಸುದ್ದಿಗೋಷ್ಠಿ ಉದ್ದೇಶಿಸಿ ಮಾತಾಡಿದ ಅವರು, ಈ ಹಿಂದಿನ ಚುನಾವಣೆಯಲ್ಲಿ ನಾನು 136 ಸ್ಥಾನ ಬರುತ್ತದೆ ಅಂತ ಹೇಳಿದ್ದೆ. ಈಗಲೂ ಬರೆದಿಟ್ಕೊಳ್ಳಿ, 2028ಕ್ಕೆ ಇದೇ ಡಿಕೆ ಶಿವಕುಮಾರ್, ಇದೇ ಕಾಂಗ್ರೆಸ್ ಸರ್ಕಾರ ಇರುತ್ತದೆ. 2028ರ ಮುಂಬರುವ ಚುನಾವಣೆಯಲ್ಲೂ ಕಾಂಗ್ರೆಸ್ ಸರ್ಕಾರವೇ ಅಧಿಕಾರಕ್ಕೆ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ದೇಶದಲ್ಲಿ ಇಂಧನ ದರ ಏರಿಕೆ ಕುರಿತು ಉಲ್ಲೇಖಿಸಿ ಕೇಂದ್ರದ ವಿರುದ್ಧ ವಾಗ್ದಾಳಿ ನಡೆಸಿದರು. ಮೇ.30ಕ್ಕೆ ಪ್ರತಿಭಟನೆ ನಡೆಸುತ್ತೇವೆ ಎಂದು ತಿಳಿಸಿದರು.

## ಕೇಂದ್ರದಿಂದ 57 ಲಕ್ಷ ಕೋಟಿ ಲೂಟಿ

### ಬಿಜೆಪಿ ಸರ್ಕಾರದ ವಿರುದ್ಧ ಕಾಂಗ್ರೆಸ್ ನಾಯಕರ ವಾಗ್ದಾಳಿ

**ಬೆಂಗಳೂರು:** ನರೇಂದ್ರ ಮೋದಿ ನೇತೃತ್ವದ ಕೇಂದ್ರದ ಬಿಜೆಪಿ ಸರ್ಕಾರ ಕಳೆದ 12 ವರ್ಷಗಳಲ್ಲಿ ಪ್ರತಿ ದಿನ 1,000 ಕೋಟಿಯಂತೆ ಪೆಟ್ರೋಲ್, ಡೀಸೆಲ್ ತೆರಿಗೆ ಮೂಲಕ 57 ಲಕ್ಷ ಕೋಟಿ ಲೂಟಿ ಮಾಡಿದೆ ಎಂದು ಕಾಂಗ್ರೆಸ್ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸ್ ನಾಯಕರು ವಾಗ್ದಾಳಿ ನಡೆಸಿದರು.

ನಗರದಲ್ಲಿ ಜಂಟಿ ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲಾ, ಐದು ರಾಜ್ಯಗಳ ಚುನಾವಣೆ ಮುಗಿಯುತ್ತಿದಂತೆ ಕೇಂದ್ರ ಸರ್ಕಾರ ಇಂಧನ ದರ ಹೆಚ್ಚಿಸಿ ಲೂಟಿ ಆರಂಭಿಸಿದೆ. ಬಿಜೆಪಿ ಹಾಗೂ ಕೇಂದ್ರದ ವಿರುದ್ಧ ಪ್ರತಿ ವಿಧಾನಸಭಾ ಕ್ಷೇತ್ರದಲ್ಲೂ ಹೋರಾಟ ಹಮ್ಮಿಕೊಳ್ಳಲು ಕಾಂಗ್ರೆಸ್ ನಿರ್ಧರಿಸಿದೆ ಎಂದು ಹೇಳಿದರು.

ಪೆಟ್ರೋಲ್, ಡೀಸೆಲ್ ಬೆಲೆಯನ್ನು ಪ್ರತಿ ಲೀಟರ್‌ಗೆ 7.52 ಹೆಚ್ಚಿಸಲಾಗಿದೆ. ವೇತನ ವರ್ಗ, ರೈತರು, ಬಡವರು, ಗೃಹಿಣಿಯರು, ಸಣ್ಣ ಉದ್ಯಮಿಗಳು ಹಾಗೂ ಜನಸಾಮಾನ್ಯರ ಜೇಬಿಗೆ ಕತ್ತರಿ ಹಾಕಿದೆ. ಇದು ಬಿಜೆಪಿ ಹಾಗೂ ಕೇಂದ್ರ ಸರ್ಕಾರ ಮಾಡುತ್ತಿರುವ ವಂಚನೆ ಮತ್ತು ಸುಲಿಗೆ ಎಂದು ಕಿಡಿಕಾರಿದರು.

ಅತಿರೇಕದ ಲೂಟಿ ಮತ್ತು ಪಿಕ್‌ಪಾಕೆಟ್ ವಿರುದ್ಧ ಸಾಮಾನ್ಯ ಜನರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಆದರೂ, ಬಿಜೆಪಿ ನಾಯಕರು ಜನರ ಸಂಕಷ್ಟವನ್ನು ಹಾಸ್ಯ ಮಾಡುತ್ತಿದ್ದಾರೆ. ಕನ್ನಡಿಗರೂ ಸೇರಿದಂತೆ ದೇಶದ ಜನರು ಎದುರಿಸುತ್ತಿರುವ ಜೀವನೋಪಾಯದ ಬಿಕ್ಕಟ್ಟಿಗೆ ಸ್ಪಂದಿಸದೆ ಮೌನವಾಗಿದ್ದಾರೆ. ಗೃಹ



ಬಳಕೆ, ವಾಣಿಜ್ಯ ಬಳಕೆಯ ಎಲ್‌ಪಿಜಿ, ಸಣ್ಣ ಎಫ್‌ಟಿಎಲ್ ಸಿಲಿಂಡರ್ ಹಾಗೂ ಸಿಎನ್‌ಜಿ ಬೆಲೆಗಳಲ್ಲೂ ಲೂಟಿ ಮಾಡಿದೆ. ಕೇಂದ್ರದ ನಿರ್ಧಾರವು ದೈನಂದಿನ ಬಳಕೆಯ ಎಲ್ಲಾ ಅಗತ್ಯ ವಸ್ತುಗಳ ಬೆಲೆಗಳ ಮೇಲೂ ಪರಿಣಾಮ ಬೀರಿದೆ ಎಂದು ಟೀಕಿಸಿದರು.


ಯುಪಿಎ ಅವಧಿಯಲ್ಲಿ (ಮೇ, 2014) ಪೆಟ್ರೋಲ್ ಬೆಲೆ ಪ್ರತಿ ಲೀಟರ್‌ಗೆ 71.41, ಡೀಸೆಲ್ ಬೆಲೆ 56.71 ಇತ್ತು. ಇಂದು ಪ್ರತಿ ಲೀಟರ್‌ಗೆ ಪೆಟ್ರೋಲ್ 110.93 ಹಾಗೂ ಡೀಸೆಲ್ 98.89 ಇದೆ. 2014ರ ಕಚ್ಚಾ ತೈಲ ಪ್ರತಿ ಬ್ಯಾರೆಲ್‌ಗೆ 108 ಯುಎಸ್‌ಡಿ ಮತ್ತು ಪಶ್ಚಿಮ ಏಷ್ಯಾದಲ್ಲಿ ಯುದ್ಧ ಪ್ರಾರಂಭವಾಗುವ ಮುಂಚೆ ಪ್ರತಿ ಬ್ಯಾರೆಲ್‌ಗೆ 70 ಯುಎಸ್‌ಡಿ ಹೋಲಿಸಿದರೆ, ಪೆಟ್ರೋಲ್ 61.60 ಮತ್ತು ಡೀಸೆಲ್ 56.99 ಇರಬೇಕಾಗಿತ್ತು. ಉಳಿದ ಹೆಚ್ಚುವರಿ ಹಣವನ್ನು ಬಿಜೆಪಿ ಲೂಟಿ ಎಂದು ಆರೋಪಿಸಿದರು.

ತುರ್ತು ಸಂದರ್ಭಗಳಲ್ಲಿ ದೇಶಕ್ಕೆ ನೆರವಾಗಲು ಇರುವ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ತುರ್ತು ಮೀಸಲು ನಿಧಿಯನ್ನು ಲೂಟಿ ಮಾಡುವ ಹಂತಕ್ಕೂ ಕೇಂದ್ರ ಸರ್ಕಾರ ತಲುಪಿದೆ. ಎರಡು ದಿನಗಳ ಹಿಂದೆ, ಡಾಲರ್ ಎದುರು ಭಾರತೀಯ ರೂಪಾಯಿ ಮೌಲ್ಯ ಕುಸಿದಿರುವುದರ ಲಾಭವನ್ನು ಪಡೆದುಕೊಂಡು, ಆರ್‌ಬಿಐನ ಅಮೂಲ್ಯವಾದ ವಿದೇಶಿ ವಿನಿಮಯ ಮೀಸಲನ್ನು ಮಾರಾಟ ಮಾಡುವ ಮೂಲಕ ಮೋದಿ ಪುಟ 2ಕ್ಕೆ

## ಎಚ್‌ಡಿಡಿಗೆ ರಾಜ್ಯಸಭೆ ಸ್ಥಾನ ಕೇಳಿಲ್ಲ

### ಬಿಜೆಪಿ ಹೈಕಮಾಂಡ್ ತೀರ್ಮಾನಕ್ಕೆ ಬಿಡಲಾಗಿದೆ: ಎಚ್.ಡಿ.ಕುಮಾರಸ್ವಾಮಿ

**ಬೆಂಗಳೂರು:** ಮಾಜಿ ಪ್ರಧಾನಿ ಎಚ್.ಡಿ ದೇವೇಗೌಡ ಅವರನ್ನು ಮತ್ತೊಮ್ಮೆ ರಾಜ್ಯಸಭೆಗೆ ನಾಮನಿರ್ದೇಶನ ಮಾಡಬೇಕೇ ಬೇಡವೇ ಎಂಬುದನ್ನು ಬಿಜೆಪಿ ತೀರ್ಮಾನಿಸಬೇಕು ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.



ನಾನು ಅಥವಾ ದೇವೇಗೌಡರಾಗಲಿ ಈ ವಿಷಯವನ್ನು ಯಾರೊಂದಿಗೂ ಚರ್ಚಿಸಿಲ್ಲ ಎಂದು ತಮ್ಮ ತಂದೆಗೆ ಮತ್ತೆ ರಾಜ್ಯಸಭಾ ಟಿಕೆಟ್ ಸಿಗುವ ಸಾಧ್ಯತೆ ಬಗ್ಗೆ ಕೇಳಿದಾಗ ಎಚ್.ಡಿ ಕುಮಾರಸ್ವಾಮಿ ಹೇಳಿದರು.

ಬಿಜೆಪಿಗೆ 63 ಶಾಸಕರು ಇದ್ದಾರೆ. ಅವರ ಪಕ್ಷದಲ್ಲೇ ಹಲವು ಸಮಸ್ಯೆಗಳಿವೆ. ನಾನು ಅಥವಾ ದೇವೇಗೌಡರು ಇದನ್ನು ಏಕೆ ಚರ್ಚಿಸಬೇಕು? ದೆಹಲಿಯಲ್ಲಿ ಯಾವ ಪುಟ 2ಕ್ಕೆ

## ಜಿರಳೆ ಪಾರ್ಟಿ ವಿರುದ್ಧ ಸಿಬಿಐ ತನಿಖೆಗೆ ಪಿಐಎಲ್

**ನವದೆಹಲಿ:** ಸಾಮಾಜಿಕ ಜಾಲತಾಣಗಳಲ್ಲಿ ಭಾರೀ ಚರ್ಚೆಗೆ ಗ್ರಾಸವಾಗಿರುವ ಕಾಕ್ರೋಚ್ ಜನತಾ ಪಾರ್ಟಿ ವಿರುದ್ಧ ಸಿಬಿಐ ತನಿಖೆ ನಡೆಸಬೇಕೆಂದು ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ತುರ್ತು ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ನಿರಾಕರಿಸಿದೆ.

ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಅವರ ನೇತೃತ್ವದ ಪೀಠವು ಸೋಮವಾರ ಅರ್ಜಿಯ ವಿಚಾರಣೆ ನಡೆಸಿತು. ಅರ್ಜಿದಾರರ ವಾದವನ್ನು ಆಲಿಸಿದ ಸಿಜೆಐ, ಈ ವಿಷಯದಲ್ಲಿ ಯಾವುದೇ ಗಂಭೀರವಾದ ತುರ್ತು ಪರಿಸ್ಥಿತಿ ಇಲ್ಲ. ಇದನ್ನು ಅಷ್ಟೊಂದು ಭಾವನಾತ್ಮಕವಾಗಿ ತೆಗೆದುಕೊಳ್ಳುವ ಅಗತ್ಯವೂ ಇಲ್ಲ ಎಂದು ತಿಳಿಸಿದರು. ಅಲ್ಲದೆ, ಸಾಮಾನ್ಯ ನ್ಯಾಯಾಂಗ ಪ್ರಕ್ರಿಯೆಯಂತೆ ಸೂಕ್ತ ಸಮಯದಲ್ಲಿ ಈ ಅರ್ಜಿಯ ಪರಿಶೀಲನೆ ನಡೆಸಲಾಗುವುದು ಎಂದು ಕೋರ್ಟ್ ಸ್ಪಷ್ಟಪಡಿಸಿತು.

ಕಲಾಪದಲ್ಲಿ ಮಾತನಾಡಿದ ಸಿಜೆಐ ಸೂರ್ಯ ಕಾಂತ್ ಅವರು, ಈ ಹಿಂದೆ ನ್ಯಾಯಾಲಯದಲ್ಲಿ ತಾವಾಡಿದ್ದ 'ಜಿರಳೆ' ಎಂಬ ರೂಪಕದ ಹೇಳಿಕೆಯನ್ನು ಮಾಧ್ಯಮಗಳು ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ತಪ್ಪು ದಾರಿಗೆಳೆಯಲಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ನನ್ನ ಹೇಳಿಕೆಯನ್ನು ಸಂಪೂರ್ಣವಾಗಿ ತಪ್ಪಾಗಿ






ಅರ್ಥೈಸಲಾಗಿದೆ. ಕೇವಲ ನಕಲಿ ಮತ್ತು ಬೋಗಸ್ ಪದವಿಗಳನ್ನು ಬಳಸಿಕೊಂಡು ಕಾನೂನು ವೃತ್ತಿಗೆ ಪ್ರವೇಶಿಸುತ್ತಿರುವ ಅಕ್ರಮ ಜಾಲವನ್ನು ಟೀಕಿಸಲು ನಾನು ಆ ಪದ ಬಳಸಿದ್ದೇನೆಯೇ ಹೊರತು, ದೇಶದ ನಿರುದ್ಯೋಗಿ ಯುವಕರನ್ನು ಉದ್ದೇಶಿಸಿ ಅಲ್ಲ ಎಂದು ಮುಖ್ಯ ನ್ಯಾಯಮೂರ್ತಿಗಳು ಮತ್ತೊಮ್ಮೆ ಸ್ಪಷ್ಟಪಡಿಸಿದರು.

## ನಾನೂ ರಾಜ್ಯಸಭಾ ಸ್ಥಾನದ ಆಕಾಂಕ್ಷಿ: ಡಿ.ವಿ.ಸದಾನಂದಗೌಡ

**ಮೈಸೂರು:** ರಾಜ್ಯಸಭಾ ಸದಸ್ಯ ಸ್ಥಾನಕ್ಕೆ ನಾನೂ ಅಪೇಕ್ಷಿತ. ನಾನು ಸಕ್ರೀಯ ಚುನಾವಣಾ ರಾಜಕೀಯದಿಂದ ದೂರ ಉಳಿದಿದ್ದೇನೆ. ಹೀಗಾಗಿ ಪಕ್ಷದ ಹಿರಿಯರು ರಾಜ್ಯಸಭೆ ಅಥವಾ ಬೇರೆ ಯಾವುದೇ ಸ್ಥಾನಮಾನ ನೀಡಿದರೆ ನಿಭಾಯಿಸುತ್ತೇನೆ ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದ ಗೌಡ ತಿಳಿಸಿದರು.



ನಗರದಲ್ಲಿ ಸೋಮವಾರ ಮಾಧ್ಯಮದೊಂದಿಗೆ ಮಾತನಾಡಿ, ಎನ್‌ಡಿಎ ಮಿತ್ರ ಪಕ್ಷದ ಸ್ಥಾನ ಖಾಲಿಯಾಗುವ ಕಾರಣ ಈ ಬಗ್ಗೆ ತೀರ್ಮಾನವನ್ನು ರಾಷ್ಟ್ರೀಯ ನಾಯಕರು ಮಾಡುತ್ತಾರೆ. ನಾನು ರಾಜ್ಯಸಭಾ ಸ್ಥಾನದ ಅಪೇಕ್ಷಿತ ಎಂಬುದನ್ನು ನಮ್ಮ ಹೈಕಮಾಂಡ್‌ಗೆ ತಿಳಿಸಿದ್ದೇನೆ ಎಂದು ಸ್ಪಷ್ಟಪಡಿಸಿದರು.

ಬಿಜೆಪಿ ರಾಜ್ಯಾಧ್ಯಕ್ಷರ ಬದಲಾವಣೆ ಕುರಿತು ಪ್ರತಿಕ್ರಿಯಿಸಿ, ನಮ್ಮಲ್ಲಿ ಅಧ್ಯಕ್ಷರ ಬದಲಾವಣೆ ಪ್ರಸ್ತಾಪ ಇಲ್ಲ. ಈಗ ಅವರು ಎರಡು ವರ್ಷ ಮುಗಿಸಿದ್ದಾರೆ. ಇನ್ನೊಂದು ವರ್ಷದಲ್ಲಿ ಅವಧಿಯೇ ಮುಗಿಯುತ್ತದೆ. ಬಿಜೆಪಿ ಎಲ್ಲಾ ಕಡೆ ಜಯಭೇರಿ ಭಾರಿಸುತ್ತಿದೆ. ರಾಜ್ಯದಲ್ಲಿ ಹಿಂದೆ ಜನಸೇವೆ ಮಾಡಿದ ಬಿಜೆಪಿಯನ್ನು ಹೇಗೆ ಮತ್ತೆ ಅಧಿಕಾರಕ್ಕೆ ತರಬೇಕು ಎನ್ನುವ ಮೂಲ ವಿಚಾರ ತಿಳಿಸುವ ಕೆಲಸವಾಗುತ್ತಿದೆ ಎಂದು ಹೇಳಿದರು.

ಕಾಂಗ್ರೆಸ್ ಎಸ್‌ಐಆರ್‌ಗೆ ವಿರೋಧ ವ್ಯಕ್ತಪಡಿಸುವ ಕುರಿತ ಪತ್ರಕರ್ತರ ಪ್ರಶ್ನೆಗೆ ಪ್ರತಿಕ್ರಿಯಿಸಿ, ಕಾಂಗ್ರೆಸ್ ರಾಜ್ಯದ ಜನ ತನಗೆ ಕೊಟ್ಟ ಜವಬ್ದಾರಿ ನಿರ್ವಹಿಸಲಾಗದೆ. ಜನ ನಮ್ಮ ಮೇಲೆ ಮುಗಿಬಿದ್ದಾಗ ಅವರ ದಿಕ್ಕು ತಪ್ಪಿಸಲು ಎಸ್‌ಐಆರ್ ಬಗ್ಗೆ ಸುಳ್ಳು ಹರಡುವ ಕೆಲಸ ಮಾಡುತ್ತಿದೆ. ಕಾಂಗ್ರೆಸ್ ಸರ್ಕಾರದ ಹಿಂದೂ ವಿರೋಧಿ ಧೋರಣೆಯಿಂದ ಜನ ರೋಸಿ ಹೋಗಿದ್ದಾರೆ. ಈಗ ಚುನಾವಣೆ ನಡೆದರೂ ಕಾಂಗ್ರೆಸ್ ಐವತ್ತು ಸ್ಥಾನಕ್ಕಿಂತ ಕೆಳಗಿಳಿಯಲಿದೆ ಎಂದು ಅಭಿಪ್ರಾಯಪಟ್ಟರು. ಪುಟ 2ಕ್ಕೆ

## ಎಐಎಡಿಎಂಕೆ ಮೂವರು ಶಾಸಕರು ರಾಜೀನಾಮೆ

### ಟಿವಿಕೆಗೆ ಸೇರ್ಪಡೆ ಆಗುವ ಮೂಲಕ ಪಳನಿಸ್ವಾಮಿ ಬಣಕ್ಕೆ ಬಿಗ್ ಶಾಕ್

**ಚೆನ್ನೈ:** ತಮಿಳುನಾಡಿನ ರಾಜಕೀಯ ಬೆಳವಣಿಗೆಯಲ್ಲಿ ಎಐಎಡಿಎಂಕೆ ಪಕ್ಷದ ಎಸ್.ಪಿ.ವೇಲುಮಣಿ ಮತ್ತು ಸಿ.ವಿ ಷಣ್ಮುಗಂ ಬಣದ ಮೂವರು ಶಾಸಕರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವ ಮೂಲಕ ಮಹತ್ವದ ತಿರುವು ನೀಡಿದ್ದಾರೆ.

ಎಐಎಡಿಎಂಕೆ ಪಕ್ಷದ ಮರಗತಂ ಕುಮಾರ್‌ವೇಲ್ (ಮಧುರಾಂತಕಂ ಕ್ಷೇತ್ರ), ಜಯಕುಮಾರ್ (ಪೆರುಂದುರೈ ಕ್ಷೇತ್ರ), ಸತ್ಯಭಾಮಾ (ಧಾರಾಪುರಂ ಕ್ಷೇತ್ರ) ಅವರು ತಮಿಳುನಾಡು ವಿಧಾನಸಭೆ ಸ್ಪೀಕರ್ ಜೆ.ಸಿ.ಡಿ ಪ್ರಭಾಕರ್ ಅವರನ್ನು ಭೇಟಿಯಾಗಿ ತಮ್ಮ ರಾಜೀನಾಮೆ ಪತ್ರಗಳನ್ನು ಸಲ್ಲಿಸಿದ್ದಾರೆ.

ರಾಜೀನಾಮೆ ನೀಡಿರುವ ಈ ಮೂವರು ಶಾಸಕರು ಸಚಿವ ಆಧವ್ ಅರ್ಜುನ್ ಅವರನ್ನು ಭೇಟಿಯಾಗಿ ಟಿವಿಕೆ ಸೇರಿದರು. ಇದರೊಂದಿಗೆ ತಮಿಳುನಾಡು ವಿಧಾನಸಭೆಯಲ್ಲಿ ಇನ್ನೂ ಮೂರು ಸ್ಥಾನಗಳು ಖಾಲಿಯಾಗಿವೆ. ಸಿಎಂ ವಿಜಯ್ ಎರಡು ಕ್ಷೇತ್ರಗಳಲ್ಲಿ ಗೆದ್ದಿದ್ದ ಹಿನ್ನೆಲೆಯಲ್ಲಿ ರಾಜೀನಾಮೆ ನೀಡಿದ ನಂತರ ತಿರುಚ್ಚಿ ಪೂರ್ವ ಕ್ಷೇತ್ರ ಖಾಲಿಯಾಗಿತ್ತು.

ತಮಿಳುನಾಡು ವಿಧಾನಸಭಾ ಚುನಾವಣೆಯ ನಂತರ ಎಐಎಡಿಎಂಕೆಯಲ್ಲಿ ತೀವ್ರ ಆಂತರಿಕ ಕಲಹ ಏರ್ಪಟ್ಟಿದೆ.



ಪಕ್ಷದ ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಕೆ.ಪಳನಿಸ್ವಾಮಿ ವಿರುದ್ಧ ಬಂಡಾಯ ಎದ್ದಿರುವ ಎಸ್.ಪಿ ವೇಲುಮಣಿ ಮತ್ತು ಸಿ.ವಿ ಷಣ್ಮುಗಂ ನೇತೃತ್ವದ ಸುಮಾರು 30 ಶಾಸಕರ ಗುಂಪು, ನಟ–ರಾಜಕಾರಣಿ ವಿಜಯ್ ಅವರ ತಮಿಳಗ ವೆಟ್ರಿ ಕಳಗಂ ಸರ್ಕಾರಕ್ಕೆ ಬೆಂಬಲ ಘೋಷಿಸಿತ್ತು.

ವಿಧಾನಸಭೆಯ ಕಲಾಪದಲ್ಲಿ ಈ ಬಂಡಾಯ ಶಾಸಕರು ಎಐಎಡಿಎಂಕೆ ಪಕ್ಷದ ಅಧಿಕೃತ ವಿಪ್ ಉಲ್ಲಂಘಿಸಿ, ಮುಖ್ಯಮಂತ್ರಿ ವಿಜಯ್ ಸರ್ಕಾರದ ಪರವಾಗಿ ವಿಶ್ವಾಸಮತ ಚಲಾಯಿಸಿದ್ದರು. ಈ ಹಿನ್ನೆಲೆಯಲ್ಲಿ ಪಕ್ಷದ್ರೋಹ ಎಸಗಿದ ಇವರನ್ನು ಶಾಸಕ ಸ್ಥಾನದಿಂದ ಅನರ್ಹಗೊಳಿಸಲು ಇಪಿಎಸ್ ನೇತೃತ್ವದ ಎಐಎಡಿಎಂಕೆ ನಾಯಕತ್ವವು ಕಾನೂನು ಪ್ರಕ್ರಿಯೆಯನ್ನು ಆರಂಭಿಸಿತ್ತು. ಮುನ್ನವೇ ಎಚ್ಚೆತ್ತುಕೊಂಡಿರುವ ಈ ಮೂವರು ಶಾಸಕರು ತಾವಾಗಿಯೇ ರಾಜೀನಾಮೆ ನೀಡಿ ಪಕ್ಷದಿಂದ ಹೊರಬಂದಿದ್ದಾರೆ.

## 4ನೇ ಬಾರಿ ತೈಲ ಬೆಲೆ ಏರಿಕೆ

### ಕೇಂದ್ರದಿಂದ 10 ದಿನದಲ್ಲಿ 7.50 ರೂ. ಬೆಲೆ ಏರಿಕೆ ಬರೆ

**ನವದೆಹಲಿ:** ಕೇಂದ್ರ ಸರ್ಕಾರ ಸೋಮವಾರ ಬೆಳ್ಳಂಬೆಳಗ್ಗೆ ದೇಶದ ಗ್ರಾಹಕರಿಗೆ 4ನೇ ಬಾರಿಗೆ ತೈಲ ಶಾಕ್ ಕೊಟ್ಟಿದೆ. ಲೀಟರ್ ಪೆಟ್ರೋಲ್ ಬೆಲೆ 2.61 ರೂ. ಮತ್ತು ಡೀಸೆಲ್ ಬೆಲೆ ಪ್ರತಿ ಲೀಟರ್‌ಗೆ 2.71 ರೂ. ಏರಿಕೆ ಮಾಡಿದೆ. ಇದು ಕಳೆದ 10 ದಿನಗಳಲ್ಲಿ 4ನೇ ಬಾರಿಗೆ ಮಾಡಿದ ದರ ಏರಿಕೆಯಾಗಿದೆ.

ಬೆಂಗಳೂರು ನಗರದಲ್ಲಿ ಪೆಟ್ರೋಲ್ ಬೆಲೆ ಈಗ ಲೀಟರ್‌ಗೆ 110.89 ರೂ. ಹಾಗೂ ಡೀಸೆಲ್ ಬೆಲೆ ಲೀಟರ್‌ಗೆ 98.80 ರೂ.ಗೆ ತಲುಪಿದೆ. ಮೇ 15 ರಂದು ಮೊದಲ ಬಾರಿಗೆ ಏಕಾಏಕಿ ಪೆಟ್ರೋಲ್, ಡೀಸೆಲ್ ಮೇಲಿನ ಬೆಲೆಯನ್ನು 3 ರೂ. ಹೆಚ್ಚಳ ಮಾಡಿತ್ತು. ಬಳಿಕ ಮೇ 23 ರಂದು ಪೆಟ್ರೋಲ್ ದರವನ್ನು 87 ಪೈಸೆ ಮತ್ತು ಡೀಸೆಲ್ 91 ಪೈಸೆ ಏರಿಕೆ ಮಾಡಲಾಗಿತ್ತು. ಇದೀಗ ಮತ್ತೆ ಪೆಟ್ರೋಲ್ ಮೇಲಿನ ಬೆಲೆ 2.61 ರೂ. ಮತ್ತು ಡೀಸೆಲ್ ಮೇಲಿನ ಬೆಲೆ 2.71 ರೂ. ಏರಿಸಿದೆ. ಇದರಿಂದ ವಾಹನ ಸವಾರರಿಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ.

ಮೇ 15ರಿಂದ ಆರಂಭವಾದ ಈ ಸರಣಿ ಏರಿಕೆಯಿಂದ ಒಟ್ಟಾರೆ ಪ್ರತಿ ಲೀಟರ್ ಪೆಟ್ರೋಲ್ ಮತ್ತು ಡೀಸೆಲ್ ದರಗಳಲ್ಲಿ ಸುಮಾರು ರೂ.7.5ರಷ್ಟು ಹೆಚ್ಚಳವಾಗಿರುವುದು ಸಾಮಾನ್ಯ ಜನರಲ್ಲಿ ಆತಂಕ ಮೂಡಿಸಿದೆ.



ಇಂಧನ ದರ ಏರಿಕೆಯಿಂದ ಸಾರಿಗೆ ವೆಚ್ಚ, ಆಹಾರ ವಸ್ತುಗಳ ಬೆಲೆ, ಕೈಗಾರಿಕಾ ಉತ್ಪಾದನಾ ವೆಚ್ಚ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಬೆಲೆ ಏರಿಕೆಯ ಭೀತಿ ಎದುರಾಗಿದೆ.

ರಾಜ್ಯ ಸರ್ಕಾರಗಳ ಸ್ಥಳೀಯ ತೆರಿಗೆಗಳು ಬೇರೆಬೇರೆ ಇರುವುದರಿಂದ ಪ್ರತಿ ರಾಜ್ಯದಲ್ಲೂ ದರಗಳಲ್ಲಿ ವ್ಯತ್ಯಾಸ ಕಂಡು ಬರುತ್ತಿದೆ. ಈಗಿನ ಹೊಸ ಏರಿಕೆಯಿಂದ ಎರಡು ವಾರಗಳ ಅವಧಿಯಲ್ಲಿ ಜನರ ಮೇಲೆ ಪುಟ 2ಕ್ಕೆ

## ಮೊದಲನೇ ಪುಟದಿಂದ

### 4ನೇ ಬಾರಿ ತೈಲ ಬೆಲೆ ಏರಿಕೆ

ಭಾರೀ ಹೊರೆ ಬಿದ್ದಂತಾಗಿದೆ. ಹಲವು ತಿಂಗಳುಗಳ ಕಾಲ ಸ್ಥಿರವಾಗಿದ್ದ ಇಂಧನ ದರಗಳು ಏಕಾಏಕಿ ನಿರಂತರವಾಗಿ ಏರಿಕೆಯಾಗುತ್ತಿರುವುದು ವಾಹನ ಸವಾರರು ಮತ್ತು ಮಧ್ಯಮ ವರ್ಗದ ಜನರಿಗೆ ಸಂಕಷ್ಟ ತಂದೊಡ್ಡಿದೆ.

ಪಶ್ಚಿಮ ಬಂಗಾಳ ಸೇರಿದಂತೆ ಪಂಚ ರಾಜ್ಯಗಳ ಚುನಾವಣಾ ಫಲಿತಾಂಶಗಳ ನಂತರವೇ ದರ ಪರಿಷ್ಕರಣೆ ಆರಂಭವಾದ ಕಾರಣ ರಾಜಕೀಯ ಆರೋಪ–ಪ್ರತ್ಯಾರೋಪಗಳು ಹೆಚ್ಚಾಗಿವೆ.

ಪೆಟ್ರೋಲ್ ಮತ್ತು ಡೀಸೆಲ್ ದರ ಏರಿಕೆಯಿಂದ ಮುಂದಿನ ದಿನಗಳಲ್ಲಿ ಬಸ್, ಆಟೋ, ಟ್ಯಾಕ್ಸಿ ದರಗಳೂ ಏರಬಹುದಾದ ಸಾಧ್ಯತೆ ಇದೆ. ಸರಕು ಸಾಗಣೆ ವೆಚ್ಚ ಹೆಚ್ಚಾದರೆ ತರಕಾರಿ, ಹಣ್ಣು, ದಿನಸಿ ಸೇರಿದಂತೆ ಸಾಮಾನ್ಯ ಬಳಕೆಯ ವಸ್ತುಗಳ ಬೆಲೆಯೂ ಹೆಚ್ಚಾಗುವ ಸಾಧ್ಯತೆ ಇದೆ. ಈಗಾಗಲೇ ದುಬಾರಿ ಜೀವನದಿಂದ ಬಳಲುತ್ತಿರುವ ಜನರಿಗೆ ಈ ಇಂಧನ ದರ ಏರಿಕೆ ಮತ್ತೊಂದು ದೊಡ್ಡ ಹೊರೆ ಆಗಿದೆ.

ಎರಡು ವಾರದಲ್ಲಿ 4ನೇ ಬಾರಿಗೆ ತೈಲ ದರ ಏರಿಕೆ ಮಾಡಲಾಗಿದೆ ಎಂದು ವಾಹನ ಸವಾರರು ಆಕ್ರೋಶ ಹೊರಹಾಕಿದ್ದಾರೆ. ಪದೇ ಪದೇ ದರ ಏರಿಸಿದರೆ ಹೇಗೆ ಎಂದು ಪ್ರಶ್ನಿಸಿದ್ದಾರೆ.

### ನಾನೂ ರಾಜ್ಯಸಭಾ ಸ್ಥಾನದ ಆಕಾಂಕ್ಷಿ: ಡಿ.ವಿ.ಸದಾನಂದಗೌಡ

ಪೆಟ್ರೋಲ್, ಡೀಸೆಲ್ ಬೆಲೆಯೇರಿಕೆ ಬಗ್ಗೆ ಮಾತನಾಡಿ, ಜಾಗತಿಕ ಮಟ್ಟದಲ್ಲಿ ಸಮಸ್ಯೆ ಬಂದರೂ ಅದನ್ನು ಹತೋಟಿಯಲ್ಲಿಡುವ ಕೆಲಸ ಆಗಿದೆ. ಹೀಗಾಗಿ ಪೆಟ್ರೋಲ್, ಡಿಸೇಲ್ ಬೆಲೆ ಹೆಚ್ಚಿದೆ. ಆದರೂ ಯಾರಿಗೂ ಸಮಸ್ಯೆಯಾಗದಂತೆ ನೋಡಿಕೊಳ್ಳಲಾಗುತ್ತಿದೆ ಎಂದು ಹೇಳಿದರು.

### ನನಗೂ ಏನೂ ಗೊತ್ತಿಲ್ಲ!: ಡಿಕೆಶಿ

ಸಂಪುಟ ಪುನಾರಚನೆ ಅಥವಾ ನಾಯಕತ್ವ ಬದಲಾವಣೆಯೇ ಯಾವ ವಿಚಾರಕ್ಕೆ ಸಿಎಂ ಅವರನ್ನು ಹೈಕಮಾಂಡ್ ಕರೆದಿರಬಹುದು ಎಂದು ಕೇಳಿದ ಪ್ರಶ್ನೆಗೆ ಅದೂ ನನಗೆ ಗೊತ್ತಿಲ್ಲ ಎಂದಷ್ಟೇ ಉತ್ತರಿಸಿದ್ದಾರೆ. ಸದ್ಯಕ್ಕೆ ಹೈಕಮಾಂಡ್‌ನಿಂದ ಯಾವುದೇ ಮಾಹಿತಿ ಬಂದಿಲ್ಲ ಎಂದರು.

### ಹೈಕಮಾಂಡ್ 'ಅಜೆಂಡಾ ಗೊತ್ತಿಲ್ಲ'!

ತೆರಳಿ ಚರ್ಚೆ ನಡೆಸುವುದಾಗಿ ತಿಳಿಸಿದ್ದಾರೆ.

ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿ ಬದಲಾವಣೆಯ ಕುರಿತು ಸಮಯವೇ ಉತ್ತರ ನೀಡಲಿದೆ ಎಂದು ಹೇಳಿದ್ದಾರೆ.

ಮುಖ್ಯಮಂತ್ರಿಯನ್ನು ಒಳಗೊಂಡಂತೆ ಕರ್ನಾಟಕದಲ್ಲಿ ಒಟ್ಟು 34 ಸಚಿವ ಸ್ಥಾನಗಳಿಗೆ ಅನುಮತಿ ಇದೆ. ಪ್ರಸ್ತುತ ಮೂರು ಸಚಿವ ಸ್ಥಾನಗಳು ಖಾಲಿ ಇವೆ.ನಾಗೇಂದ್ರ ರಾಜೀನಾಮೆ ನೀಡಿದ್ದರು. ಕೆ.ಎನ್ ರಾಜಣ್ಣ ಅವರನ್ನು ಪಕ್ಷದ ಹೈಕಮಾಂಡ್ ಸಚಿವ ಸ್ಥಾನದಿಂದ ವಜಾ ಮಾಡಿತ್ತು. ಸಚಿವ ಡಿ ಸುಧಾಕರ್ ನಿಧನದಿಂದ ಮೂರನೇ ಸ್ಥಾನವೂ ಖಾಲಿಯಾಗಿದೆ.

### ಕೇಂದ್ರದಿಂದ 57 ಲಕ್ಷ ಕೋಟಿ ಲೂಟಿ

ಸರ್ಕಾರ ಆರ್‌ಬಿಐನಿಂದ 2.87 ಲಕ್ಷ ಕೋಟಿ ಪಡೆದುಕೊಂಡಿದೆ ಎಂದು ಆರೋಪಿಸಿದರು.

### ಎಚ್‌ಡಿಡಿಗೆ ರಾಜ್ಯಸಭೆ ಸ್ಥಾನ ಕೇಳಿಲ್ಲ

ನಿರ್ಧಾರವಾಗುತ್ತದೆಯೋ ಅದೇ ಅಂತಿಮ. ದೇವೇಗೌಡರಿಗಾಗಿ ಮತ್ತೊಬ್ಬರ ಅವಕಾಶ ಕಸಿದುಕೊಳ್ಳಬೇಕು ಎಂದು ನಾವು ಹೇಳಲು ಸಾಧ್ಯವಿಲ್ಲ. ಅವರು ಏನು ಮಾಡಲು ಬಯಸುತ್ತಾರೆ ಎಂಬುದನ್ನು ಅವರೇ ತೀರ್ಮಾನಿಸಲಿ ಎಂದು ಹೇಳಿದರು.

ಕರ್ನಾಟಕದಲ್ಲಿ ಖಾಲಿಯಾಗಲಿರುವ ನಾಲ್ಕು ರಾಜ್ಯಸಭಾ ಸ್ಥಾನಗಳಿಗೆ ಚುನಾವಣೆ ನಡೆಯಲಿದೆ. ಇದರಲ್ಲಿ ದೇವೇಗೌಡರ ಸ್ಥಾನವೂ ಸೇರಿದೆ. ಜೂನ್ 18ರಂದು ಚುನಾವಣೆ ನಡೆಯಲಿದೆ.

ಕಾಂಗ್ರೆಸ್ ಮೂರು ಸ್ಥಾನಗಳನ್ನು ಗೆಲ್ಲುವ ಸಾಧ್ಯತೆ ಹೊಂದಿದೆ. ಬಿಜೆಪಿ ಒಂದು ಸ್ಥಾನ ಗೆಲ್ಲಬಹುದು. ಜೆಡಿಎಸ್ ಪಕ್ಷಕ್ಕೆ ವಿಧಾನಸಭೆಯಲ್ಲಿ ಅಗತ್ಯ ಸಂಖ್ಯಾಬಲ ಇಲ್ಲದಿರುವುದರಿಂದ ದೇವೇಗೌಡರು ಮತ್ತೊಮ್ಮೆ ರಾಜ್ಯಸಭೆಗೆ ಆಯ್ಕೆಯಾಗಲು ಬಿಜೆಪಿಯ ಬೆಂಬಲದ ಮೇಲೆ ಅವಲಂಬಿತರಾಗಿದ್ದಾರೆ.

ಕರ್ನಾಟಕ ಬಿಜೆಪಿ ಘಟಕ ತನ್ನ ಪಾಲಿಗೆ ಸಿಗಬಹುದಾದ ರಾಜ್ಯಸಭಾ ಸ್ಥಾನಕ್ಕೆ ಮಾಜಿ ಮುಖ್ಯಮಂತ್ರಿ ಡಿ.ವಿ ಸದಾನಂದ ಗೌಡ ಪರವಾಗಿ ಒಲವು ತೋರಿಸುತ್ತಿದೆ. ಅಲ್ಲದೆ, ಕಲ್ಯಾಣ ಕರ್ನಾಟಕ ಭಾಗದವರಿಗೆ ಟಿಕೆಟ್ ನೀಡಬೇಕು ಎಂಬ ಬೇಡಿಕೆಯೂ ಕೇಳಿಬರುತ್ತಿದೆ. ಲೋಕಸಭಾ ಚುನಾವಣೆಯಲ್ಲಿ ಈ ಭಾಗದ ಎಲ್ಲಾ ಸ್ಥಾನಗಳನ್ನು ಕಾಂಗ್ರೆಸ್ ಗೆದ್ದಿರುವುದರಿಂದ, ಬಿಜೆಪಿಗೆ ಈಗ ಕಲ್ಯಾಣ ಕರ್ನಾಟಕ ಪ್ರದೇಶದಿಂದ ಯಾವುದೇ ಲೋಕಸಭಾ ಪ್ರತಿನಿಧಿ ಇಲ್ಲ.

## ಮೇಕೆದಾಟು ಅನುಷ್ಠಾನಕ್ಕೆ ಬಿಡಬಾರದು: ವಿಜಯ್ ಆದೇಶ



**ಚೆನ್ನೈ:** ಮೇಕೆದಾಟು ಯೋಜನೆ ವಿರುದ್ಧ ಕಾನೂನು ಹೋರಾಟ ಮುಂದುವರಿಸಲು ತಮಿಳುನಾಡು ಮುಖ್ಯಮಂತ್ರಿ ಜೋಸೆಫ್ ವಿಜಯ್ ಖಡಕ್ ಸೂಚನೆ ನೀಡಿದ್ದಾರೆ

ಮೇಕೆದಾಟು ಯೋಜನೆಗೆ ಶೀಘ್ರವೇ ಗುದ್ದಲಿ ಪೂಜೆ ಮಾಡಲಾಗುವುದು ಎಂದು ಡಿಸಿಎಂ ಡಿ.ಕೆ ಶಿವಕುಮಾರ್ ಹೇಳಿದ ಬೆನ್ನಲ್ಲೇ, ಮೇಕೆದಾಟು ಜಲಾಶಯ ಯೋಜನೆಯನ್ನು ಯಾವುದೇ ಕಾರಣಕ್ಕೂ ಅನುಷ್ಠಾನಕ್ಕೆ ತರಲು ಬಿಡಬಾರದು ಎಂದು ವಿಜಯ್ ಅಧಿಕಾರಿಗಳಿಗೆ ಸೂಚನೆ ನೀಡಿದರು. ಮೇಕೆದಾಟು ಯೋಜನೆ ವಿರುದ್ಧದ ಕಾನೂನು ಹೋರಾಟವನ್ನು ತ್ವರಿತಗತಿಯಲ್ಲಿ ಮುಂದುವರಿಸುವಂತೆ ಹಾಗೂ ರಾಜ್ಯದ ನೀರಾವರಿ ಹಕ್ಕುಗಳನ್ನು ರಕ್ಷಿಸುವಲ್ಲಿ ಯಾವುದೇ ರಾಜಿ ಮಾಡಿಕೊಳ್ಳದಂತೆ ನಿರ್ದೇಶನ ನೀಡಿದ್ದಾರೆ.

ಚೆನ್ನೈನಲ್ಲಿ ಕಾವೇರಿ ಜಲವಿವಾದ ಮತ್ತು ಕಾನೂನು ತಜ್ಞರೊಂದಿಗೆ ಉನ್ನತ ಮಟ್ಟದ ತುರ್ತು ಸಭೆ ನಡೆಸಿದ ವಿಜಯ್, ಜಲ ವಿವಾದದ ಇತಿಹಾಸ, ಹಾಲಿ ನೀರು ಹಂಚಿಕೆ ಪ್ರಕ್ರಿಯೆ ಮತ್ತು ಮೇಕೆದಾಟು ಆಣೆಕಟ್ಟು ನಿರ್ಮಾಣ ಮಾಡಲು ಕರ್ನಾಟಕ ಸರ್ಕಾರ ನಡೆಸುತ್ತಿರುವ ಪ್ರಸ್ತಾಪಗಳ ಬಗ್ಗೆ ಸುದೀರ್ಘ ಮಾಹಿತಿ ಪಡೆದುಕೊಂಡರು.

ಸಭೆಯ ವೇಳೆ ಕಾನೂನು ತಜ್ಞರು ಸುಪ್ರೀಂ ಕೋರ್ಟ್‌ನಲ್ಲಿ ಮೇಕೆದಾಟು ಜಲವಿವಾದಕ್ಕೆ ಸಂಬಂಧಿಸಿದಂತೆ ನಡೆದಿರುವ ಬೆಳವಣಿಗೆಗಳನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದಾರೆ.

## ಚಿನ್ನ ದೋಖಾ: ಎಸ್‌ಐಟಿಗೆ ವಹಿಸಿ

**ಮೈಸೂರು:** ಕೋಟ್ಯಾಂತರ ಮೌಲ್ಯದ ಚಿನ್ನಾಭರಣ ಮೋಸ ಮಾಡಿರುವ ಸೌಂದರ್ ರಾಜ್ ಅಲಿಯಾಸ್ ಚಿನ್ನ ತಂಬಿ ಪ್ರಕರಣವನ್ನು ಎಸ್‌ಐಟಿಗೆ ವಹಿಸಬೇಕು ಎಂದು ಜನತಾದಳ (ಸಂಯುಕ್ತ) ಕರ್ನಾಟಕ ರಾಜ್ಯ ಉಪಾಧ್ಯಕ್ಷ ಕೆ.ವಿ.ಶಿವರಾಮ್ ಆಗ್ರಹಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾರುಕಟ್ಟೆ ಮೌಲ್ಯಕ್ಕಿಂತ ಕಡಿಮೆ ಬಡ್ಡಿ ಹಾಗೂ ಗರಿಷ್ಠ ಬೆಲೆಗೆ ಖರೀದಿಸುವುದಾಗಿ ಗ್ರಾಹಕರನ್ನು ಆಕರ್ಷಿಸಿ ಅವರಿಂದ ಚಿನ್ನಾಭರಣ ಖರೀದಿ ಮತ್ತು ಗಿರವಿ ಇಟ್ಟುಕೊಂಡು ವಂಚಿಸಲಾಗಿದೆ. ಅಲ್ಲದೆ ಗ್ರಾಹಕರ ಚಿನ್ನಾಭರಣಗಳನ್ನು ಕರಗಿಸಿ ದುರುಪಯೋಗ ಪಡಿಸಿಕೊಂಡು ಮೋಸ ಮಾಡಲಾಗಿದೆ. ಹೀಗಾಗಿ ಸರ್ಕಾರ ಉನ್ನತ ಮಟ್ಟದ ತನಿಖೆ ನಡೆಸಿ ನೊಂದವರಿಗೆ ನ್ಯಾಯ ಒದಗಿಸಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಎಸ್.ಎಸ್.ಮೂರ್ತಿ, ಕೂಡ್ಲೂರು ಶ್ರೀಧರ ಮೂರ್ತಿ, ರಂಗನಾಥ, ಬಾಬಾ ಸಾಹೇಬ್ ಉಪಸ್ಥಿತರಿದ್ದರು.

# ಮತದಾರರ ಜಾಗೃತಿಗೆ ಕಾಂಗ್ರೆಸ್ ಪಣ

## ಮೂರು ಜಿಲ್ಲೆಗಳ ಮತದಾರರ ಜಾಗೃತಿಗೆ ಮಹತ್ವದ ಸಭೆ

**ಮೈಸೂರು:** ಮತ ಪರಿಷ್ಕರಣೆ ವಿರುದ್ಧ ಈಗಾಗಲೇ ಸಂಘಟನಾತ್ಮಕ ಹೋರಾಟಕ್ಕೆ ಮುಂದಾಗಿರುವ ರಾಜ್ಯ ಕಾಂಗ್ರೆಸ್ ಮತದಾರರಿಗೂ ಈ ಬಗ್ಗೆ ಜಾಗೃತಿ ಮೂಡಿಸಲು ಬೂತ್ ಮಟ್ಟದಲ್ಲಿ ಕಾರ್ಯಕ್ರಮ ರೂಪಿಸುವ ಸಂಬಂಧ ಮೈಸೂರಿನಲ್ಲಿ ಮೂರು ಜಿಲ್ಲೆಗಳ ಪ್ರಮುಖರ ಸಭೆ ನಡೆಸಿತು.

ಮೈಸೂರಿನ ಇಂದಿಗಾಂಧಿ ಕಾಂಗ್ರೆಸ್ ಭವನದಲ್ಲಿ ಜಾಗೃತ ಕರ್ನಾಟಕ ಸಂಚಾಲಕ ವಾಸು ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಮೈಸೂರು, ಚಾಮರಾಜನಗರ ಹಾಗೂ ಕೊಡುಗು ಜಿಲ್ಲೆಯ ಕಾಂಗ್ರೆಸ್ ಮುಖಂಡರು ಭಾಗವಹಿಸಿದ್ದರು. ಈ ವೇಳೆ ಮಾತನಾಡಿದ ಜಾಗ್ರತ ಕರ್ನಾಟಕ ಸಂಚಾಲಕ ವಾಸು, ಮತಪರಿಷ್ಕರಣೆ ಯಲ್ಲಿ ಮತಕಳವು ಯಾವ ರೀತಿ ನಡೆಯುತ್ತಿದೆ. ಜೀವಂತ ಇರುವ ಮತದಾರರನ್ನು ಯಾವೆಲ್ಲಾ ಮಾರ್ಗದ ಮೂಲಕ ತೆಗೆದು ಹಾಕಲಾಗುತ್ತಿದೆ. ಮತದಾರರ ಮರುಸೇರ್ಪಡೆ ಹಾಗೂ ಮತದಾರರು ಮತದಾನದ ಹಕ್ಕು ಹೊಂದಿರುವ ಖಚಿತತೆ ಬಗ್ಗೆ ಯಾವ ರೀತಿ ಜಾಗೃತಿ ಮೂಡಿಸಬೇಕೆಂದು ತಿಳಿಸಿದರು. ಜತೆಗೆ ಬೂತ್ ಮಟ್ಟದಲ್ಲಿ ಕಾರ್ಯಕರ್ತರ ಮೂಲಕ ಪ್ರತಿ ಮತದಾರರನ್ನು ತಲುಪಿ ಜಾಗೃತಿ ಮೂಡಿಸುವಂತೆ ಹೇಳಿದರು.

ಪ್ರಾಥಮಿಕ ಹಂತವಾಗಿ ಮೊದಲು ಕಾಂಗ್ರೆಸ್ ಕಾರ್ಯಕರ್ತರನ್ನು ಗುರಿಯಾಗಿಸಿಕೊಂಟು ಮತಕಳವು ನಡೆಯುತ್ತಿದ್ದು, ಈ ಹಿನ್ನೆಲೆಯಲ್ಲಿ ಮೊದಲು ನಾವು ಕಾಂಗ್ರೆಸ್ ಕಾರ್ಯಕರ್ತರ ಮತದಾನದ ಹಕ್ಕು

ಉಳಿಸುವ ಹಾಗೂ ಮತದಾನ ಸೇರ್ಪಡೆ ಕೆಲಸ ಮಾಡುವ ಕುರಿತು ಕೈಗೊಳ್ಳಬೇಕಾದ ಕ್ರಮಗಳ ಕುರಿತು ಸವಿವರವಾಗಿ ತಿಳಿಸಿದರು.

ಮುಂದಿನ ದಿನಗಳಲ್ಲಿ ವಿಧಾನಸಭಾವಾರು ವಾರ್ಡ್ ಅಧ್ಯಕ್ಷ ಮೂಲಕ ಬಿಎಲ್ ಎ 2ಗಳ ಮೂಲಕ ಪ್ರತಿ ಬೂತ್ ಮತದಾರರ ಮಾಹಿತಿ



ಸಂಗ್ರಹಿಸಬೇಕು. ಈ ವೇಳೆ ಮತದಾರರ ಹೆಸರು ಕೈಬಿಟ್ಟಿರುವವರ ವರದಿ ಸಿದ್ಧಪಡಿಸಿ ಅವರನ್ನು ಪುನರ್ ಸೇರ್ಪಡೆಗೂ ಕ್ರಮವಹಿಸಿ ಅದರ ವರದಿ ನೀಡಬೇಕೆಂದು ಹೇಳಿದರು. ಈ ಬಗ್ಗೆ ಹಾಲಿ ಹಾಗೂ ಮಾಜಿ ಶಾಸಕರು ಆಯಾ ನಗರ, ಜಿಲ್ಲಾಧ್ಯಕ್ಷರ ನೇತೃತ್ವದಲ್ಲಿ ಸಭೆ ನಡೆಸುವುದು ಕಡ್ಡಾಯ ಎಂದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಹಾಗೂ ಶಾಸಕ ತನ್ವೀರ್ ಸೇಠ್, ಶಾಸಕರಾದ ಹರೀಶ್ ಗೌಡ, ಅನಿಲ್ ಚಿಕ್ಕಮಾದು, ಡಿ.ರವಿಶಂಕರ್, ಗಣೇಶ್ ಪ್ರಸಾದ್, ಎ.ಆರ್.ಕೃಷ್ಣಮೂರ್ತಿ, ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ,ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಎಚ್.ಪಿ.ಮಂಜುನಾಥ್, ಮೈಸೂರು ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಚಾಮರಾಜನಗರ ಜಿಲ್ಲಾಧ್ಯಕ್ಷ ಮರಿಸ್ವಾಮಿ,

ಕೊಡಗು ಜಿಲ್ಲಾಧ್ಯಕ್ಷ ಧರ್ಮಜ ಉತ್ತಪ್ಪ, ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ರಾಮಪ್ಪ, ಪಿರಿಯಾಪಟ್ಟಣ ತಾಲ್ಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷ ನಿತಿನ್ ವೆಂಕಟೇಶ್, ಮೈಸೂರು ಜಿಲ್ಲಾ ಮಾದ್ಯಮ ವಕ್ತಾರ ಕೆ.ಮಹೇಶ್, ಮಾಜಿ ಮೇಯರ್ ಪುಷ್ಪಲತಾ ಚಿಕ್ಕಣ್ಣ, ಚಿಕ್ಕಣ್ಣ ಇನ್ನಿತರರು ಉಪಸ್ಥಿತರಿದ್ದರು.



### ಎಚ್ಚರವಹಿಸದಿದ್ದರೆ ಅಪಾಯ ಕಟ್ಟಿಟ್ಟ ಬುತ್ತಿ

ಮುಖ್ಯಮಂತ್ರಿಗಳ ಸ್ವಕ್ಷೇತ್ರ ಸೇರಿ ಕಾಂಗ್ರೆಸ್ ಗೆಲ್ಲುವ ಕ್ಷೇತ್ರದಲ್ಲಿ ಮತಗಳವು ಹೆಚ್ಚಳವಾಗಿ ನಡೆಯುತ್ತಿದೆ. ಈ ಬಗ್ಗೆ ಎಲ್ಲರೂ ಎಚ್ಚರವಹಿಸದೇ ಇದ್ದರೆ ಮುಂದೆ ಅಪಾಯ ಕಟ್ಟಿಟ್ಟ ಬುತ್ತಿಯಾಗಲಿದೆ. ಈ ಹಿನ್ನೆಲೆಯಲ್ಲಿ ಎಲ್ಲರೂ ಜಾಗರೂಕರಾಗಿ ಒಬ್ಬನೇ ಒಬ್ಬ ಮತದಾರರ ಹೆಸರು ಮತಪರಿಷ್ಕರಣೆಯಿಂದ ಕೈ ಬಿಡದಂತಿರುವ ಬಗ್ಗೆ ಕಾರ್ಯನಿರ್ವಹಿಸಿ ಎಂದು ಜಾಗ್ರತ ಕರ್ನಾಟಕ ಸಂಚಾಲಕ ವಾಸು ಎಚ್ಚರವಹಿಸಿದರು.

## ಜೈವಿಕ ವೈವಿಧ್ಯ ಸಂರಕ್ಷಣೆಗೆ ಪ್ರತಿಯೊಬ್ಬರ ಪಾತ್ರ ಅಗತ್ಯ: ಅನಂತರಾಮು



**ಚಾಮರಾಜನಗರ:** ಪರಿಸರ ಎಂಬುದು ಭೂಮಿಯ ಹುಟ್ಟಿನೊಂದಿಗೆ ಜನಿಸಿದ್ದು, ಅದರ ಮೇಲಿನ ಅತಿಯಾದ ಹಸ್ತಕ್ಷೇಪದಿಂದ ಜೀವಜಾಲದ ನಂಟು ಶಿಥಿಲವಾಗುತ್ತಿದೆ" ಎಂದು ಮುಖ್ಯಮಂತ್ರಿ ಪದಕ ಪುರಸ್ಕೃತ ಉಪ ವಲಯ ಅರಣ್ಯ ಅಧಿಕಾರಿ ಸಂತೇಮರಹಳ್ಳಿ ಬಿ. ಅನಂತರಾಮು ಅಭಿಪ್ರಾಯಪಟ್ಟರು.

ಜಿಲ್ಲೆಯ ಯಳಂದೂರು ಪಟ್ಟಣದ ರಾಘವೇಂದ್ರಸ್ವಾಮಿ ಮಠದಲ್ಲಿ ಶನಿವಾರ ಸಂಜೆ ಗಾಯತ್ರಿ ಬಳಗ ವತಿಯಿಂದ ಆಯೋಜಿಸಿದ್ದ ಜೈವಿಕ ಸಂರಕ್ಷಣಾ ದಿನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಘಟ್ಟ ಪ್ರದೇಶಗಳು ಮನುಕುಲಕ್ಕೆ ಅಗತ್ಯವಾದ ಜೀವವಾಯುವನ್ನು ಪೂರೈಸುತ್ತಿದ್ದು, ನೂರಾರು ವನ್ಯಜೀವಿಗಳು, ವ್ಯಾಘ್ರಗಳು ಹಾಗೂ ಆನೆಗಳಿಗೆ ಆಶ್ರಯವಾಗಿವೆ ಎಂದು ಹೇಳಿದರು.

ಅಪರೂಪದ ಸಸ್ಯ ವರ್ಗಗಳನ್ನು ಉಳಿಸಿ ಬೆಳೆಸುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ. ಮುಂದಿನ ಪೀಳಿಗೆಗೆ ಜೀವಜಗತ್ತಿನ ಮಹತ್ವ ಹಾಗೂ ಪರಿಸರ ಸಂರಕ್ಷಣೆಯ ಅರಿವು ಮೂಡಿಸುವ ಕಾರ್ಯ ಈಗಿನಿಂದಲೇ ಆರಂಭವಾಗಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಗಾಯತ್ರಿ ಬಳಗದ ವತಿಯಿಂದ ಅನಂತರಾಮು ಅವರನ್ನು ಅಭಿನಂದಿಸಲಾಯಿತು.

ಗಾಯತ್ರಿ ಬಳಗದ ಅಧ್ಯಕ್ಷ ರಘುನಾಥ್, ಉಪಾಧ್ಯಕ್ಷ ಗಣೇಶ್, ನಾರಾಯಣ್ ರಾವ್, ಕಾರ್ಯದರ್ಶಿ ಶ್ರೀಧರ್, ಸೇತು ಹಾಗೂ ಬಳಗದ ಪದಾಧಿಕಾರಿಗಳು ಮತ್ತು ಸದಸ್ಯರು ಉಪಸ್ಥಿತರಿದ್ದರು.

## ಬಾಲಕನ ಸಾವಿಗೆ ಕಾರಣವಾದ ಚಿರತೆ ಸೆರೆ


**ಚಾಮರಾಜನಗರ:** ಹನೂರು ತಾಲೂಕಿನ ಮಲೆ ಮಹದೇಶ್ವರ ಬೆಟ್ಟದ ಶ್ರೀ ಕ್ಷೇತ್ರ ನಾಗಮಲೆಗೆ ತೆರಳುತ್ತಿದ್ದ ಬಾಲಕನನ್ನು ಬಲಿ ಪಡೆದಿದ್ದ ಚಿರತೆಯನ್ನು ಸೆರೆ ಹಿಡಿಯುವಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಯಶಸ್ವಿಯಾಗಿದ್ದಾರೆ.

ಬೆಂಗಳೂರಿನಿಂದ ಮಲೆ ಮಹದೇಶ್ವರ ಬೆಟ್ಟಕ್ಕೆ ಆಗಮಿಸಿದ್ದ 6ರಕ್ಕೂ ಹೆಚ್ಚು ಮಹಿಳೆಯರು ಮಲೆ ಮಹದೇಶ್ವರ ಬೆಟ್ಟಕ್ಕೆ ಬಂದು ಮೇ 10 ರಂದು ಬೆಳಗ್ಗೆ ಬೆಳಗ್ಗೆ ತೆರಳುತ್ತಿದ್ದರು. ಬೆಳಗ್ಗೆ 7:45ರ ವೇಳೆ ಹರ್ಷಿತ್ ಎಂಬ ಬಾಲಕನ ಮೇಲೆ ಚಿರತೆ ದಾಳಿ ನಡೆಸಿದ ಪರಿಣಾಮ ಗಾಯಗೊಂಡು ಸ್ಥಳದಲ್ಲಿಯೇ ಬಾಲಕ ಮೃತಪಟ್ಟಿದ್ದ.

ಅರಣ್ಯ ಇಲಾಖೆಯ ಸಿಬ್ಬಂದಿಗಳ ನಿರ್ಲಕ್ಷ್ಯದ ವಿರುದ್ಧ ಸ್ಥಳೀಯ ನಿವಾಸಿಗಳು ಹಾಗೂ ಹೋರಾಟಗಾರರು ಅರಣ್ಯ ಇಲಾಖೆಯ ಕಾರ್ಯ ವೈಖರಿಯ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದ್ದರು. ಚಿರತೆ ದಾಳಿಯಿಂದ ಬಾಲಕ ಮೃತಪಟ್ಟ ಹಿನ್ನೆಲೆ ಎಚ್ಚೆತ್ತ ಅರಣ್ಯ ಇಲಾಖೆ ಚಿರತೆಯನ್ನು ಸೆರೆ ಹಿಡಿಯಲು ಕ್ರಮ ವಹಿಸಿದ್ದರು. ಚಿರತೆ ಚಲನವಲವನ್ನು ಪತ್ತೆಹಚ್ಚಲು ನಾಲ್ಕು ಥರ್ಮಲ್ ಡ್ರೋಣ್ ಬಳಕೆ ಮಾಡಿದ್ದರು. ತಜ್ಞ ಪಶು ವೈದ್ಯಾಧಿಕಾರಿಗಳು ಸ್ಥಳದಲ್ಲಿ ಮೊಕ್ಕಂ ಹೂಡಿದ್ದರು.

ಅರಣ್ಯ ಇಲಾಖೆಯ ಸಿಬ್ಬಂದಿಗಳ ನಿರ್ಲಕ್ಷ್ಯದ ವಿರುದ್ಧ ಸ್ಥಳೀಯ ನಿವಾಸಿಗಳು ಹಾಗೂ ಹೋರಾಟಗಾರರು ಅರಣ್ಯ ಇಲಾಖೆಯ ಕಾರ್ಯ ವೈಖರಿಯ ಬಗ್ಗೆ ಆಕ್ರೋಶ ಹೊರಹಾಕಿದ್ದರು.

ಚಿರತೆ ದಾಳಿಯಿಂದ ಬಾಲಕ ಮೃತಪಟ್ಟ ಹಿನ್ನೆಲೆ




ಎಚ್ಚೆತ್ತ ಅರಣ್ಯ ಇಲಾಖೆ ಚಿರತೆಯನ್ನು ಸೆರೆ ಹಿಡಿಯಲು ಈಗಾಗಲೇ ಅಗತ್ಯ ಕ್ರಮ ವಹಿಸಿ, ಚಿರತೆ ಚಲನವಲವನ್ನು ಪತ್ತೆಹಚ್ಚಲು ನಾಲ್ಕು ಥರ್ಮಲ್ ಡೋನ್ ಮುಖಾಂತರ ಪತ್ತೆ ಹಚ್ಚಲು ಕ್ರಮವಹಿಸಿ ಸ್ಥಳದಲ್ಲಿಯೇ ತಜ್ಞ ಪಶು ವೈದ್ಯಾಧಿಕಾರಿಗಳು ಮೊಕ್ಕಂ ಹೂಡಿದ್ದರು.

15 ದಿನಗಳ ಬಳಿಕ ಸೆರೆ: ಕಾವೇರಿ ವನ್ಯಜೀವಿಧಾಮ ವ್ಯಾಪ್ತಿಯ ಇಂಡಿಗನತ್ತ ಸಮೀಪ ಚಿರತೆ ದಾಳಿ ನಡೆಸಿ ಬಾಲಕ ಮೃತಪಟ್ಟ ಹಿನ್ನೆಲೆ ಮುನ್ನೆಚ್ಚರಿಕೆ ಕ್ರಮವಾಗಿ ಇಂಡಿಗನತ್ತ ನಾಗಮಲೆ ಮಾರ್ಗವಾಗಿ ಚಿರತೆಯನ್ನು ಸೆರೆ ಹಿಡಿಯಲು ಮೂರು ಬೋನ್ ಇಟ್ಟು ಕಾರ್ಯಾಚರಣೆ ನಡೆಸಲಾಗಿತ್ತು. ಫೋನ್ ಗಳಲ್ಲಿ ನಾಯಿ ಮತ್ತು ಮೇಕೆಯನ್ನು ಬಿಟ್ಟು ಚಿರತೆ ಸೆರೆಗೆ ಸತತ ಪ್ರಯತ್ನ ನಡೆಸಲಾಗಿತ್ತು. ಅಂತೂ 15 ದಿನಗಳ ಬಳಿಕ ಅರಣ್ಯ ಅಧಿಕಾರಿಗಳು ಚಿರತೆಯನ್ನು ಸೆರೆ ಹಿಡಿದಿದ್ದಾರೆ.

## ನಾಗಮಲೆಯಲ್ಲಿ ಮತ್ತೆ ಚಿರತೆ ದಾಳಿ; ಬೆಚ್ಚಿದ ಜನರು

**ಚಾಮರಾಜನಗರ:** ಇಂಡಿಗನತ್ತದಲ್ಲಿ ಚಿರತೆ ಸೆರೆ ಬೆನ್ನಲ್ಲೇ ನಾಗಮಲೆ ಯಲ್ಲಿ ಭಾನುವಾರ ತಡರಾತ್ರಿ 1.30 ರ ವೇಳೆ ಚಿರತೆಯೊಂದು ದಾಳಿ ನಡೆಸಿದ್ದು, ಮೇಕೆಯನ್ನು ಬಲಿ ಪಡೆದಿದೆ.

ತಾಲೂಕಿನ ಮಲೆಮಹದೇಶ್ವರ ಬೆಟ್ಟದ ಅರಣ್ಯ ಪ್ರದೇಶದ ವ್ಯಾಪ್ತಿ ಯಲ್ಲಿರುವ ಇಂಡಿಗನತ್ತದಲ್ಲಿ ಭಾನುವಾರ ಹೆಣ್ಣು ಚಿರತೆ ಸೆರೆಯಾದ ಬೆನ್ನಲ್ಲೆ ಜನರು ನಿಟ್ಟುಸಿರು ಬಿಟ್ಟಿದ್ದರು. ಆದರೆ ಭಾನುವಾರ ತಡರಾತ್ರಿ ನಾಗಮಲೆಯ ಪುಟ್ಟೇಗೌಡ ಎಂಬುವವರ ಮೇಕೆಯ ಮೇಲೆ ಚಿರತೆ ದಾಳಿ ನಡೆಸಿ ಬಲಿ ಪಡೆದಿದೆ.




ನಾಗಮಲೆಯಲ್ಲಿ ಚಿರತೆ ದಾಳಿಯಿಂದ ಜನರು ಬೆಚ್ಚಿ ಬಿದ್ದಿದ್ದು, ಇಂಡಿಗನತ್ತದಲ್ಲಿ ಸೆರೆ ಹಿಡಿದ ಹಾಗೆ ನಾಗಮಲೆಯಲ್ಲೂ ಕಾರ್ಯಾಚರಣೆ ನಡೆಸಿ ಚಿರತೆಯನ್ನು ಸೆರೆ ಹಿಡಿಯಲು ಜನರ ಒತ್ತಾಯಿಸಿದ್ದಾರೆ.

## ಬಿಆರ್‌ಟಿಯಲ್ಲಿ ಹೆಣ್ಣು ಮರಿಯಾನೆ ಸಾವು

**ಚಾಮರಾಜನಗರ:** ಪುಣಜನೂರು ವನ್ಯಜೀವಿ ವಲಯದ ವ್ಯಾಪ್ತಿಯಲ್ಲಿ ಹೆಣ್ಣು ಮರಿಯಾನೆಯೊಂದು ಮೃತಪಟ್ಟಿದೆ.

ಬಿ.ಆರ್.ಟಿ ಹುಲಿ ಸಂರಕ್ಷಿತ ಪ್ರದೇಶದ ಪುಣಜನೂರು ವನ್ಯಜೀವಿ ವಲಯದ ಬೇಡಗುಳಿ ಶಾಖೆಯ, ನೀರದುರ್ಗಿ ಗಸ್ತಿನ ಮರಳುಪಾಳ ದಲ್ಲಿನ ಅರಣ್ಯ ಪ್ರದೇಶದಲ್ಲಿ ಸುಮಾರು 2 ವರ್ಷ ವಯಸ್ಸಿನ ಒಂದು ಹೆಣ್ಣು ಮರಿಯಾನೆ ಮೃತಪಟ್ಟಿದೆ.

ಅರಣ್ಯ ಇಲಾಖೆಯ ಸಿಬ್ಬಂದಿಗಳು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ್ದು, ಮೇಲ್ನೋಟಕ್ಕೆ ಅನಾರೋಗ್ಯದಿಂದ ಮೃತಪಟ್ಟಿರುವುದು ಕಂಡುಬಂದಿದೆ. ಇಂದು ಆನೆಯ ಶವಪರೀಕ್ಷೆ



ನಡೆಸಿ ಅಂಗಾಂಗಗಳ ಮಾದರಿಯನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ ಎಂದು ಚಾಮ ರಾಜನಗರ ವನ್ಯಜೀವಿ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಕಚೇರಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## ಲಕ್ಷ ಮನೆಗಳಲ್ಲಿ ಗ್ರಂಥಾಲಯ ಆರಂಭಿಸುವ ಗುರಿ

**ಮೈಸೂರು:** ರಾಜ್ಯಾದ್ಯಂತ ಒಂದು ಲಕ್ಷ ಮನೆಗಳಲ್ಲಿ ಗ್ರಂಥಾಲಯ ಆರಂಭಿಸುವ ಗುರಿ ಇದೆ ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ ಹೇಳಿದರು.

ಆರ್.ಟಿ.ನಗರದ ಪತ್ರಕರ್ತರ ಬಡಾವಣೆಯ ಚಿನ್ನಸ್ವಾಮಿ ವಡ್ಡಗೆರೆ ನಿವಾಸದಲ್ಲಿ ಸೋಮವಾರ ಮನೆಗೊಂದು ಗ್ರಂಥಾಲಯ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಇದಕ್ಕಾಗಿ ಪ್ರಾಧಿಕಾ ರದ ವತಿಯಿಂದ ಪ್ರತಿ ಜಿಲ್ಲೆಯಲ್ಲಿಯೂ ಓರ್ವ ಸಂಚಾಲಕ ಹಾಗೂ 9 ಸದಸ್ಯರಿರುವ ಜಾಗೃತ ಸಮಿತಿ ರಚಿಸಲಾಗಿದೆ. ಈ ಸಮಿತಿಗಳ ಮೂಲಕ ಮನೆಗೊಂದು ಗ್ರಂಥಾ



ಲಯ ಯೋಜನೆ ಯಶಸ್ವಿಯಾಗಿ ನಡೆಯುತ್ತಿದೆ ಎಂದರು.

ಜೀಮಾರಹಳ್ಳಿ ಜಯಶಂಕರ್, ಸಿ.ಓಂಪ್ರಕಾಶ್, ಡಿ.ಪಿ.ಉಮೇಶ್, ಮಹೇಶ್ ಹರವೆ, ಡಾ.ರಜನಿ ಲೋಕೇಶ್, ರಾಜು ಕೆಬ್ಬೇಪುರ, ಮಹೇಶ್, ಆರ್. ಕೃಷ್ಣ, ಸುಧೀಂದ್ರಕುಮಾರ್ ಇದ್ದರು.

ಕರ್ನಾಟಕ ಸರ್ಕಾರ
**ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ**
ಕಾರ್ಯದರ್ಶಿಯವರ ಕಾರ್ಯಾಲಯ, ಚಾಮುಂಡಿಬೆಟ್ಟ ಮೈಸೂರು – 570 010
ದೂರವಾಣಿ ಸಂ:0821–2590027, 2590082 E-mail:- eochamunditemple@gmail.com
ಶ್ರೀ.ಎಸ್.ಸಿ.ಟಿ./5/ಸಿಆರ್/12/2025–26 ದಿನಾಂಕ: 19.05.2026

**ಬಹಿರಂಗ ಹರಾಜು ಪ್ರಕಟಣೆ (ದ್ವಿಲಕೋಟೆ)**

ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ ಮೈಸೂರಿನ ಮಹಾತ್ಮ ಗಾಂಧಿ ರಸ್ತೆಯಲ್ಲಿರುವ ದಿವಾನ್ ಪೂರ್ಣಯ್ಯ ಛತ್ರದ ಹಿಂಭಾಗ ಮತ್ತು ಮುಂಭಾಗದಲ್ಲಿರುವ ವಿವಿಧ ಮಳಿಗೆಗಳನ್ನು ಮಾಹೆಯಾನ ಬಾಡಿಗೆ ಆಧಾರದಲ್ಲಿ ನೀಡಲು ಅರ್ಹ ಹಾಗೂ ಆಸಕ್ತ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ವಿವರಗಳು ಕೆಳಗಿನಂತಿದೆ.

ಛತ್ರದ ಹಿಂಭಾಗದಲ್ಲಿರುವ ಮಳಿಗೆಗಳ ವಿವರ

| ಕಸಂ | ಮಳಿಗೆ ಸಂಖ್ಯೆ | ಉದ್ದ (ಅಡಿ) | ಅಗಲ (ಅಡಿ) | ಮಳಿಗೆ ಇರುವ ಸ್ಥಳ | EMD ಮೊತ್ತ |
|---|---|---|---|---|---|
| 01 | ಮಳಿಗೆಸಂಖ್ಯೆ 2 | 10,7 | 11.5 | ನೆಲಮಹಡಿ | ಪ್ರತ್ಯೇಕವಾಗಿ ಒಂದು ಮಳಿಗೆಗೆ EMD ಮೊತ್ತ ರೂ.50,000/– |
| 02 | ಮಳಿಗೆ ಸಂಖ್ಯೆ 4 | 10.7 | 11.5 | ನೆಲಮಹಡಿ | |
| 03 | ಮಳಿಗೆ ಸಂಖ್ಯೆ 5 | 10.7 | 11.5 | ನೆಲಮಹಡಿ | |
| 04 | ಮಳಿಗೆಸಂಖ್ಯೆ 6 | 10.7 | 11.5 | ನೆಲಮಹಡಿ | |
| 05 | ಮಳಿಗೆ ಸಂಖ್ಯೆ 7 | 10.7 | 11.5 | ನೆಲಮಹಡಿ | |
| 06 | ಮಳಿಗೆಸಂಖ್ಯೆ 8 | 10.7 | 11.5 | ನೆಲಮಹಡಿ | |
| 07 | ಮಳಿಗೆ ಸಂಖ್ಯೆ 9 | 22.4 | 15.4 | 1ನೇ ಮಹಡಿ | |
| 08 | ಮಳಿಗೆ ಸಂಖ್ಯೆ 10 | 22.4 | 15.4 | 1ನೇ ಮಹಡಿ | |
| 09 | ಮಳಿಗೆ ಸಂಖ್ಯೆ 11 | 22.4 | 15.4 | 1ನೇ ಮಹಡಿ | |
| 10 | ಮಳಿಗೆ ಸಂಖ್ಯೆ 12 | 22.4 | 15.4 | 1ನೇ ಮಹಡಿ | |

ಛತ್ರದ ಮುಂಭಾಗದಲ್ಲಿರುವ ಮಳಿಗೆಗಳ ವಿವರ

| ಕಸಂ | ಮಳಿಗೆ ಸಂಖ್ಯೆ | ಉದ್ದ (ಚದರ ಮೀಟರ್ ನಲ್ಲಿ | ಅಗಲ (ಚದರ ಮೀಟರ್ ನಲ್ಲಿ | ಮಳಿಗೆ ಇರುವ ಸ್ಥಳ | EMD ಮೊತ್ತ |
|---|---|---|---|---|---|
| 01 | ಮಳಿಗೆ ಸಂಖ್ಯೆ 1 | 3,785 | 4.80 | ನೆಲಮಹಡಿ | ಪ್ರತ್ಯೇಕವಾಗಿ ಒಂದು ಮಳಿಗೆಗೆ EMD ಮೊತ್ತ ರೂ.50,000/– |
| 02 | ಮಳಿಗೆ ಸಂಖ್ಯೆ 2 | 3,785 | 4.80 | ನೆಲಮಹಡಿ | |
| 03 | ಮಳಿಗೆ ಸಂಖ್ಯೆ 3 | 3,785 | 4.80 | ನೆಲಮಹಡಿ | |
| 04 | ಮಳಿಗೆ ಸಂಖ್ಯೆ 4 | 3,785 | 4.80 | ನೆಲಮಹಡಿ | |
| 05 | ಮಳಿಗೆ ಸಂಖ್ಯೆ 5 | 3,785 | 4.80 | ನೆಲಮಹಡಿ | |
| 06 | ಮಳಿಗೆ ಸಂಖ್ಯೆ 6 | 3,785 | 4.80 | ನೆಲಮಹಡಿ | |
| 07 | ಮಳಿಗೆ ಸಂಖ್ಯೆ 7 | 3,785 | 4.80 | ನೆಲಮಹಡಿ | |
| 08 | ಮಳಿಗೆ ಸಂಖ್ಯೆ 8 | 3,785 | 4.80 | ನೆಲಮಹಡಿ | |
| 09 | ಮಳಿಗೆ ಸಂಖ್ಯೆ 9 | 3,785 | 4.80 | ನೆಲಮಹಡಿ | |
| 10 | ಮಳಿಗೆ ಸಂಖ್ಯೆ 10 | 3,785 | 4.80 | ನೆಲಮಹಡಿ | |
| 11 | ಮಳಿಗೆ ಸಂಖ್ಯೆ 11 | 3,785 | 4.80 | 1ನೇ ಮಹಡಿ | |
| 12 | ಮಳಿಗೆ ಸಂಖ್ಯೆ 12 | 3,785 | 4.80 | 1 ನೇ ಮಹಡಿ | |

ಷರಾ: ಮಾಹೆಯಾನ ನಿಗಧಿಪಡಿಸಿರುವ ಮೂಲ ದರಕ್ಕಿಂತ ಅತೀ ಹೆಚ್ಚಿನ (H-1) ದರವನ್ನು ಬಿಡ್ ಮಾಡಿದ ಬಿಡುದಾರರಿಗೆ ಹಂಚಿಕೆ ಮಾಡಲಾಗುವುದು.
**ಹೆಚ್ಚಿನ ವಿವರಗಳು: ಬಹಿರಂಗ ಹರಾಜು ದಿನಾಂಕ:01.06.2026 ಸಮಯ: ಮಧ್ಯಾಹ್ನ 3.00 ಗಂಟೆಗೆ**
**ಸ್ಥಳ: ಮೈಸೂರಿನ ಮಹಾತ್ಮ ಗಾಂಧಿ ರಸ್ತೆಯಲ್ಲಿರುವ ದಿವಾನ್ ಪೂರ್ಣಯ್ಯ ಛತ್ರದ ಬಳಿ, ಮೈಸೂರು.**
ಸಹಿ/–ಕಾರ್ಯದರ್ಶಿ
DIPR/DDMYS/217/KSMCA/168/2026-27

ಕರ್ನಾಟಕ ಸರ್ಕಾರ

# ಗ್ಯಾರಂಟಿ ಹಬ್ಬ

## 4ನೇ ವರ್ಷಕ್ಕೆ ಪಾದಾರ್ಪಣೆ

ಅನ್ನಭಾಗ್ಯ ಯೋಜನೆಯಡಿ
ಉಚಿತ ಆಹಾರಧಾನ್ಯ ವಿತರಿಸಲು ಈವರೆಗೆ

**₹18,897 ಕೋಟಿ**

ವೆಚ್ಚ ಮಾಡಲಾಗಿದ್ದು, ಹಸಿವು ಮುಕ್ತ ಕರ್ನಾಟಕದ
ಗುರಿಯನ್ನು ತಲುಪಿದ್ದೇವೆ

**ಸಿದ್ದರಾಮಯ್ಯ**
ಸನ್ಮಾನ್ಯ ಮುಖ್ಯಮಂತ್ರಿಗಳು

ಅನ್ನಭಾಗ್ಯ ಯೋಜನೆಯಡಿ

**4.26 ಕೋಟಿ**

ಪಡಿತರದಾರರು (ಪ್ರತಿ ತಿಂಗಳು) ಮೂರು
ಹೊತ್ತು ನೆಮ್ಮದಿಯಿಂದ ಊಟ ಮಾಡುತ್ತಿದ್ದಾರೆ

**ಡಿ ಕೆ ಶಿವಕುಮಾರ್**
ಮಾನ್ಯ ಉಪ ಮುಖ್ಯಮಂತ್ರಿಗಳು



## ಅನ್ನಭಾಗ್ಯ

ಪ್ರತಿ ತಿಂಗಳು ಪಡಿತರದಾರರಿಗೆ
**10 ಕೆಜಿ ಉಚಿತ ಆಹಾರಧಾನ್ಯ**

ಯಾರೂ ಹಸಿವಿನಿಂದ ಮಲಗಬಾರದು ಎಂಬ ಸಂಕಲ್ಪದೊಂದಿಗೆ, ಕೋಟ್ಯಂತರ ಕುಟುಂಬಗಳಿಗೆ ಪೌಷ್ಟಿಕ ಆಹಾರದ ಭದ್ರತೆ ನೀಡುವ ಮೂಲಕ ಕರ್ನಾಟಕದ ಗ್ಯಾರಂಟಿ ಸರ್ಕಾರವು ಕಳೆದ ಮೂರು ವರ್ಷಗಳಿಂದ ಆರೋಗ್ಯವಂತ ಸಮಾಜಕ್ಕೆ ಆಧಾರವಾಗಿದೆ

'ಅನ್ನಭಾಗ್ಯ'ದಿಂದಾಗಿರುವ ಬದಲಾವಣೆ ತಿಳಿಯಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ



ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಅವರೊಂದಿಗೆ ಮಾನ್ಯ ಸಚಿವರಾದ ಶ್ರೀ ಕೆ.ಹೆಚ್. ಮುನಿಯಪ್ಪರವರು ಅನ್ನಭಾಗ್ಯ ಯೋಜನೆಗೆ ಚಾಲನೆ ನೀಡುತ್ತಿರುವುದು

ಶಕ್ತಿ | ಗೃಹ ಜ್ಯೋತಿ | ಗೃಹಲಕ್ಷ್ಮಿ | ಯುವನಿಧಿ

"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ"

CMofKarnataka https://dipr.karnataka.gov.in/ ಕರ್ನಾಟಕ ವಾರ್ತೆ

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಹಿಂದುಳಿದ ವರ್ಗ / ಬ್ರಾಹ್ಮಣ ಸಮುದಾಯಗಳ ಮಾಲೀಕತ್ವ ಮತ್ತು ಸಂಪಾದಕತ್ವದ ಪತ್ರಿಕೆಗಳಿಗೆ ಪ್ರೋತ್ಸಾಹ ರೂಪದ ಜಾಹೀರಾತು

## ಮೆಟ್ರಿಕ್ ನಂತರದ ಪ್ರೋತ್ಸಾಹಧನಕ್ಕೆ ಅರ್ಜಿ ಆಹ್ವಾನ

**ಮೈಸೂರು:** ಸಮಾಜ ಕಲ್ಯಾಣ ಇಲಾಖಾ ವತಿಯಿಂದ 2025–26ನೇ ಶೈಕ್ಷಣಿಕ ಸಾಲಿನಲ್ಲಿ ಮೆಟ್ರಿಕ್ ನಂತರದ ದ್ವಿತೀಯ ಪಿಯುಸಿ, 3 ವರ್ಷದ ಪಾಲಿಟೆಕ್ನಿಕ್ ಡಿಪ್ಲೋಮಾ, ಪದವಿ/ಸ್ನಾತಕೋತ್ತರ ಪದವಿ ಹಾಗೂ ವೃತ್ತಿಪರ ಕೋರ್ಸ್‌ಗಳನ್ನು ಪೂರ್ಣಗೊಳಿಸಿ ಪ್ರಥಮ ಪ್ರಯತ್ನದಲ್ಲಿ, ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನವನ್ನು ನೀಡಲಾಗುತ್ತಿದ್ದು, ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಹ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು ಇಲಾಖೆಯ https://swdservices.karnataka.gov.in/PrizeMoneyClientApp/register ವೆಬ್‌ಸೈಟ್‌ನಲ್ಲಿ ಆನ್‌ಲೈನ್‌ನಲ್ಲಿ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. Acknowledgement Print, ಜಾತಿ ಪ್ರಮಾಣ ಪತ್ರ, ಆಧಾರ್ ಕಾರ್ಡ್ ಪ್ರತಿ, ಎಸ್.ಎಸ್.ಎಲ್.ಸಿ. ಅಂಕಪಟ್ಟಿ ಮತ್ತು ಹಿಂದಿನ ವರ್ಷಗಳ ಅಂಕಪಟ್ಟಿಗಳನ್ನು ಪ್ರಾಂಶುಪಾಲರಿಂದ ದೃಢೀಕರಿಸಿ ಸಮಾಜ ಕಲ್ಯಾಣ ಇಲಾಖೆ, ಮೈಸೂರು ತಾಲ್ಲೂಕು ಡಾ॥ ಬಾಬು ಜಗಜೀವನರಾಂ ಭವನ ಕಟ್ಟಡ, ಆದಿಪಂಪ ರಸ್ತೆ ಒಂಟಿಕೊಪ್ಪಲು ಪೂರ್ವ ಬಡಾವಣೆ ಪಡುವಾರಹಳ್ಳಿ ಮೈಸೂರು–12, ಇಲ್ಲಿನ ಕಛೇರಿಗೆ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಆದಾಯ ಮಿತಿ ಇರುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು ಗ್ರೇಡ್–1 ಸಮಾಜ ಕಲ್ಯಾಣ ಇಲಾಖೆ, ಮೈಸೂರು ತಾಲ್ಲೂಕು ಡಾ॥ ಬಾಬು ಜಗಜೀವನರಾಂ ಭವನ ಕಟ್ಟಡ, ಆದಿಪಂಪ ರಸ್ತೆ ಒಂಟಿಕೊಪ್ಪಲು ಪೂರ್ವ ಬಡಾವಣೆ ಪಡುವಾರಹಳ್ಳಿ ಮೈಸೂರು–12, ಇಲ್ಲಿನ ದೂರವಾಣಿ ಸಂಖ್ಯೆ–0821–2520910 ನ್ನು ಸಂಪರ್ಕಿಸಬಹುದಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕ್ರೀಡಾ ವಸತಿ ಶಾಲೆ/ನಿಲಯಗಳ ಪ್ರವೇಶಕ್ಕೆ ವಿಶೇಷ ಆಯ್ಕೆ ಪ್ರಕ್ರಿಯೆ

**ಮೈಸೂರು:** ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ 2026–27ನೇ ಸಾಲಿನಲ್ಲಿ ಕ್ರೀಡಾ ವಸತಿ ಶಾಲೆ/ನಿಲಯಗಳಿಗೆ 8ನೇ ತರಗತಿ ಮತ್ತು ಪ್ರಥಮ ಪಿ.ಯು.ಸಿ. ತರಗತಿಗೆ ಕ್ರೀಡಾಪಟುಗಳಿಗೆ ಪ್ರವೇಶ ನೀಡುವ ಸಂಬಂಧ ಜಿಲ್ಲಾ, ವಿಭಾಗ ಹಾಗೂ ರಾಜ್ಯಮಟ್ಟದಲ್ಲಿ ಆಯ್ಕೆ ಪ್ರಕ್ರಿಯೆ ನಡೆಸಲಾಗಿದ್ದು, ಸದರಿ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಲು ಸಾಧ್ಯವಾಗದ ಅಭ್ಯರ್ಥಿಗಳಿಗೆ ಮತ್ತೊಂದು ಅವಕಾಶ ನೀಡುವ ಸಂಬಂಧ ವಿಶೇಷ ಆಯ್ಕೆ ಪ್ರಕ್ರಿಯೆಯನ್ನು ನಡೆಸಲಾಗುತ್ತದೆ.

ಆಯ್ಕೆ ಪ್ರಕ್ರಿಯೆಯನ್ನು ಜೂನ್ 1 ರಂದು ಬೆಳಗ್ಗೆ 9 ಗಂಟೆಗೆ ವಾಲಿಬಾಲ್, ಸೈಕ್ಲಿಂಗ್, ಕುಸ್ತಿ, ಜುಡೋ ಕ್ರೀಡೆಗಳನ್ನು ಬೆಳಗಾವಿ ಜಿಲ್ಲಾ ಕ್ರೀಡಾಂಗಣದಲ್ಲಿ, ಅಥ್ಲೆಟಿಕ್ಸ್, ಕಬಡ್ಡಿ, ಜಿಮ್ನಾಸ್ಟಿಕ್ಸ್, ಫುಟ್ ಬಾಲ್ ಕ್ರೀಡೆಗಳನ್ನು ಮಹಾತ್ಮ ಗಾಂಧಿ ತುಮಕೂರು ಜಿಲ್ಲಾ ಕ್ರೀಡಾಂಗಣದಲ್ಲಿ, ಬಾಸ್ಕೆಟ್ ಬಾಲ್, ಬಾಕ್ಸಿಂಗ್, ಆರ್ಚರಿ, ಫೆನ್ಸಿಂಗ್, ಕ್ರೀಡೆಗಳನ್ನು ಬೆಂಗಳೂರು ಶ್ರೀ ಕಂಠೀರವ ಕ್ರೀಡಾಂಗಣದಲ್ಲಿ ಹಾಗೂ ಹಾಕಿ ಕ್ರೀಡೆಯನ್ನು ಬೆಂಗಳೂರು ಅಕ್ಕಿ ತಿಮ್ಮನಹಳ್ಳಿ ಹಾಕಿ ಕ್ರೀಡಾಂಗಣದಲ್ಲಿ ನಡೆಸಲಾಗುತ್ತದೆ.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖಾ ವತಿಯಿಂದ ರಾಜ್ಯದಲ್ಲಿ ನಡೆಸುತ್ತಿರುವ ಕ್ರೀಡಾಶಾಲೆ/ನಿಲಯಗಳಿಗೆ 14 ವರ್ಷದೊಳಗಿನ (ಜೂನ್ –2026ಕ್ಕೆ ಅನ್ವಯವಾಗುವಂತೆ) ಮತ್ತು 2026–27ನೇ ಸಾಲಿಗೆ 8ನೇ ತರಗತಿಗೆ ಪ್ರವೇಶ ಪಡೆಯಲು ಅರ್ಹತೆ ಹೊಂದಿರುವ ಹಿರಿಯರ ವಿಭಾಗದ ಯುವಕ/ಯುವತಿಯರು ಹಾಗೂ 18 ವರ್ಷದೊಳಗಿನ (ಜೂನ್ –2026ಕ್ಕೆ ಅನ್ವಯವಾಗುವಂತೆ) ಮತ್ತು 2026–27ನೇ ಸಾಲಿಗೆ ಪ್ರಥಮ ಪಿ.ಯು.ಸಿ. ತರಗತಿಗೆ ಪ್ರವೇಶ ಪಡೆಯಲು ಅರ್ಹತೆ ಹೊಂದಿರುವ ಹಿರಿಯರ ವಿಭಾಗದ ಆಸಕ್ತ ಯುವಕ/ಯುವತಿಯರು ಆಯ್ಕೆ ಪ್ರಕ್ರಿಯೆಗೆ ಬರುವಾಗ ಇತ್ತೀಚಿನ ಭಾವಚಿತ್ರ, ವೈದ್ಯಕೀಯ ದೃಢೀಕರಣ ಪತ್ರ, ಜನನ ಪ್ರಮಾಣ ಪತ್ರ ಮತ್ತು ಆಧಾರ್ ಕಾರ್ಡ್ ಅನ್ನು ತರವುದು ಕಡ್ಡಾಯವಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮೈಸೂರು ಇಲ್ಲಿನ ದೂರವಾಣಿ ಸಂಖ್ಯೆ: 0821–2564179 ನ್ನು ಸಂಪರ್ಕಿಸಬಹುದೆಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ಭಾಸ್ಕರ್ ನಾಯಕ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಡಿ.ಇ.ಎಲ್.ಇ.ಡಿ. ದಾಖಲಾತಿ ಪ್ರಕ್ರಿಯೆ ಆರಂಭ

**ಮೈಸೂರು:** 2026–27 ನೇ ಸಾಲಿನ ಡಿ.ಇ.ಎಲ್.ಇಡಿ (ಟಿ.ಸಿ.ಹೆಚ್ ಪ್ರಾಥಮಿಕ ಶಾಲಾ ಶಿಕ್ಷಕರ ತರಬೇತಿ) ದಾಖಲಾತಿ ಪ್ರಕ್ರಿಯೆಯನ್ನು ಪ್ರಾರಂಭಗಾಡಿದ್ದು, ದ್ವಿತೀಯ ಪಿ.ಯು.ಸಿ. ಪರೀಕ್ಷಾ ಫಲಿತಾಂಶದಲ್ಲಿ ಸಾಮಾನ್ಯ ಅಭ್ಯರ್ಥಿಗಳು ಶೇ. 50 ರಷ್ಟು ಪ.ಜಾತಿ/ಪ.ಪಂಗಡ ವಿದ್ಯಾರ್ಥಿಗಳಿಗೆ ಶೇ. 45 ರಷ್ಟು ಅಂಕಗಳು ಪಡೆದಿರಬೇಕು ಮತ್ತು ಪಿ.ಯು.ಸಿ ಪೂರಕ ಪರೀಕ್ಷೆಗೆ ಹಾಜರಾಗಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೂ ಅವಕಾಶ ಇರುತ್ತದೆ.

ಸಾಮಾನ್ಯ ವಿದ್ಯಾರ್ಥಿಗಳಿಗೆ ವಾರ್ಷಿಕ ಶುಲ್ಕ ಕೇವಲ ರೂ. 3065/– ಮಾತ್ರ ಇದ್ದು, ಪ.ಜಾತಿ/ಪ.ಪಂಗಡದ ವಿದ್ಯಾರ್ಥಿಗಳಿಗೆ ಯಾವುದೇ ಶುಲ್ಕ ಇರುವುದಿಲ್ಲ. ವಿದ್ಯಾರ್ಥಿವೇತನ ಶುಲ್ಕ ಮರುಪಾವತಿಗೆ ಅವಕಾಶವಿರುತ್ತದೆ, ಹಾಗೂ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ರೂ. 25000/– ಗಳ ವಿದ್ಯಾರ್ಥಿವೇತನ ಇರುತ್ತದೆ. ಡಿ.ಇ.ಎಲ್.ಇ.ಡಿ. ಕೋರ್ಸ್ ಪೂರ್ಣಗೊಂಡ ನಂತರ ಖಾಸಗಿ ಶಾಲೆಯಲ್ಲಿ ಉದ್ಯೋಗಾವಕಾಶ ಕಲ್ಪಿಸಿಕೊಡಲಾಗುವುದು.

ತಿಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ(ಡಯಟ್) ವಸಂತ್‌ಮಹಲ್ ಕಛೇರಿಯ ಪಿ.ಎಸ್.ಟಿ.ಇ. ನೋಡಲ್ ಅಧಿಕಾರಿಗಳಾದ ಚಂದ್ರಶೇಖರ ಕೆ.ಹೆಚ್ ಮೊಬೈಲ್ ನಂಬರ್: 8050033244 & ನಂಜುಂಡ ಆರಾಧ್ಯ ಉಪನ್ಯಾಸಕರು ಮೊಬೈಲ್ ನಂಬರ್: 8105949644 ಸಂಪರ್ಕಿಸಬಹುದೆಂದು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ (ಡಯಟ್) ಪ್ರಾಂಶುಪಾಲರು ಹಾಗೂ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕೆ–ಸೆಟ್ ಮತ್ತು ಯುಜಿಸಿ–ನೆಟ್ ಪರೀಕ್ಷೆಗೆ ಉಚಿತ ತರಬೇತಿ

**ಮೈಸೂರು:** ಜ್ಞಾನಬುತ್ತಿ ಸಂಸ್ಥೆ ವತಿಯಿಂದ ಕರ್ನಾಟಕ ಸರ್ಕಾರವು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಮೂಲಕ ನಡೆಸಲಿರುವ ರಾಜ್ಯ ಮಟ್ಟದ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆಗೆ (ಕೆ–ಸೆಟ್) ಮತ್ತು ನವದೆಹಲಿಯ ವಿಶ್ವವಿದ್ಯಾನಿಲಯದ ಧನಸಹಾಯ ಆಯೋಗದವರು ನಡೆಸಲಿರುವ ರಾಷ್ಟ್ರಮಟ್ಟದ ಕಾಲೇಜು ಸಹಾಯಕ ಪ್ರಾಧ್ಯಾಪಕರ (ಯುಜಿಸಿ–ನೆಟ್) ಮತ್ತು ಕಿರಿಯ ಶಿಷ್ಯ ವೇತನ ಸಂಶೋಧನ ಸಹಾಯಕರ (ಜೆಆರ್‌ಎಫ್) ಅರ್ಹತಾ ಪರೀಕ್ಷೆಗಳಿಗೆ 45 ದಿನಗಳ ತರಬೇತಿಯನ್ನು ನೀಡಲಾಗುತ್ತದೆ. ಆಸಕ್ತರು ಜೂನ್ 01 ರೊಳಗಾಗಿ ಸಂಜೆ 5:30 ರಿಂದ 7:30 ರವರೆಗೆ ಮೈಸೂರಿನ ಲಕ್ಷ್ಮೀಪುರಂ ಸರ್ಕಾರಿ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜಿನಲ್ಲಿರುವ ಜ್ಞಾನಬುತ್ತಿ ಸಂಸ್ಥೆಯಲ್ಲಿ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಂಯೋಜಕರಾದ ಕೆ.ವೈ ನಾಗೇಂದ್ರ ಅವರ ದೂ: 8296788251, ಹಾಗೂ ಸಿ.ಕೆ ಕಿರಣ್ ಕೌಶಿಕ್ ಅವರ ದೂ: 9972830857 ನ್ನು ಸಂಪರ್ಕಿಸಬಹುದೆಂದು ಕಾರ್ಯದರ್ಶಿಗಳಾದ ಹೆಚ್. ಬಾಲಕೃಷ್ಣ (9448117455) ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶಿಕ್ಷಣ ಸಚಿವ ಮಧು ಬಂಗಾರಪ್ಪ ಬದಲಾವಣೆ ಮಾಡಿ: ವಿಶ್ವನಾಥ್

**ಮೈಸೂರು:** ಶಾಲಾ ಶಿಕ್ಷಣ ಹಾಳಾಗಿದೆ. ದಯಮಾಡಿ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರನ್ನು ಬದಲಾವಣೆ ಮಾಡಿ ಬೇರೆ ಯಾರಾದರೊಬ್ಬರನ್ನು ಶಿಕ್ಷಣ ಸಚಿವರನ್ನಾಗಿ ಮಾಡಿ ಎಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರಲ್ಲಿ ವಿಧಾನಪರಿಷತ್ ಸದಸ್ಯ ಎಚ್.ವಿಶ್ವನಾಥ್ ಮನವಿ ಮಾಡಿದರು.




ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಡಿದ ಅವರು, ಶಿಕ್ಷಣ ಸಚಿವ ಮಧು ಬಂಗಾರಪ್ಪ ಶಾಲಾ ಶಿಕ್ಷಣ ವ್ಯವಸ್ಥೆಯನ್ನು ಹಾಳು ಮಾಡಿದ್ದಾರೆ. ಅವರಿಗೆ ಶಿಕ್ಷಣದ ಬಗ್ಗೆ ಅರಿವಿಲ್ಲದೆ ಆಂಗ್ಲ ಮಾಧ್ಯಮದಲ್ಲಿ ಶಿಕ್ಷಣ ಕೊಡುವುದಾಗಿ ಹೇಳುತ್ತಾರೆ. ಎಲ್ಲಿದ್ದಾರೆ ಅಷ್ಟೊಂದು ಆಂಗ್ಲ ಮಾಧ್ಯಮದ ಶಿಕ್ಷಕರು? 6 ನೇ ತರಗತಿ ಮಕ್ಕಳಿಗೆ ಸ್ಪರ್ಧಾತ್ಮಕ ಪರೀಕ್ಷೆ ತರಬೇತಿ ನೀಡುವುದಾಗಿ ಹೇಳಿದ್ದಾರೆ. ಪಿಯುಸಿ ಓದಿದವರ ಸ್ಪರ್ಧಾತ್ಮಕ ಪರೀಕ್ಷೆ ಎದುರಿಸುವುದು ಕಷ್ಟ ಅಂತಹದರಲ್ಲಿ 6 ನೇ ತರಗತಿ ಮಕ್ಕಳಿಗೆ ಸ್ಪರ್ಧಾತ್ಮಕ ಪರೀಕ್ಷೆ ಎಂದರೆ ನಗೆಪಾಟೀಲು. 3ನೇ ತರಗತಿಯಿಂದಲೇ ಸಂಗೀತ, ಕಲೆ, ಸಾಹಿತ್ಯದ ಬಗ್ಗೆ ಹೇಳಿಕೊಡುವುದಾಗಿ ಹೇಳುತ್ತಾರೆ. ಎಲ್ಲಿದ್ದಾರೆ ಸಂಗೀತ, ಕಲೆ, ಸಾಹಿತ್ಯ ಶಿಕ್ಷಕರು ಎಂದು ಪ್ರಶ್ನಿಸಿದ ಅವರು, ಶಾಲಾ ಶಿಕ್ಷಣ ಅದೋಗತಿಗೆ ಹೋಗಿದೆ. ಶಿಕ್ಷಣ ಸಚಿವರು ಬರೀ ಸುಳ್ಳು ಬೊಗಳೆ ಬಿಡುತ್ತಿದ್ದಾರೆ. ಇಂತಹ ಶಿಕ್ಷಣ ಸಚಿವರು ನಮಗೆ ಬೇಡ ಎಂದು ಹೇಳಿದರು.

1 ರಿಂದ 5 ನೇ ತರಗತಿ ವರೆಗೆ ಕನ್ನಡ ಮಾಧ್ಯಮ ಇರಬೇಕು ಎಂಬ ನಿಯಮ ಇದೆ. ಇಂಗ್ಲೀಷ್ ಭಾಷೆಯಾಗಿ ಕಲಿಸಬಹುದು ಅಷ್ಟೇ ಹೊರತು ಇಂಗ್ಲೀಷ್ ಮಾಧ್ಯಮ ಇರಬಾರದು. ಆದರೆ ಇವರು ನಿಯಮ ಉಲ್ಲಂಘಿಸಿ ಇಂಗ್ಲೀಷ್ ಮಾಧ್ಯಮ ಕೊಡುವುದಾಗಿ ಹೇಳುತ್ತಿದ್ದಾರೆ. ಇದು ಸರಿಯಾದ ಕ್ರಮವಲ್ಲ, ಕನ್ನಡದ ಬಗ್ಗೆ ಅಭಿಮಾನ ಇರುವ ಮತ್ತು ಶಿಕ್ಷಣದ ಬಗ್ಗೆ ಕಾಳಜಿ ಇರುವ ಯಾರಾದರೊಬ್ಬರನ್ನು ಶಿಕ್ಷಣ ಸಚಿವರನ್ನಾಗಿ ಮಾಡಿ. ಕೆಪಿಎಸ್ ಮ್ಯಾಗ್ನೆಟ್ ಶಾಲೆ ಆರಂಭಿಸಿ ಇನ್ನೈದು ವರ್ಷದಲ್ಲಿ ಖಾಸಗಿ ಶಾಲೆ ಮುಚ್ಚಿಸಿ ಸರ್ಕಾರಿ ಶಾಲೆಗಳಿಗೆ ಬೇಡಿಕೆ ಹೆಚ್ಚಾಗುವಂತೆ ಮಾಡುವುದಾಗಿ ಹೇಳುತ್ತಾರೆ. ಅದು ಸಾಧ್ಯವೆ? ಸುಮ್ಮನೆ ಸುಳ್ಳುಗಳನ್ನು ಹೇಳಿ ಶಿಕ್ಷಣ ವ್ಯವಸ್ಥೆ ಹಾಳು ಮಾಡಬಾರದು ಎಂದು ಹೇಳಿದರು.

ಕರ್ನಾಟಕದಲ್ಲಿ ಕಾಕ್ರೋಚ್ ಜನತಾ ಪಾರ್ಟಿ ಬರಬೇಕು. ಹೊಸ ಪಕ್ಷಕಟ್ಟುವವರಿಗೆ ಅವಕಾಶ ನೀಡಬೇಕು. ಕಾಕ್ರೋಚ್ ಜನತಾ ಪಾರ್ಟಿ ಅಧಿಕಾರಕ್ಕೆ ಬರುವ ಮೂಲಕ ರಾಜಕೀಯ ವ್ಯವಸ್ಥೆಯನ್ನು ಬದಲಾವಣೆ ಮಾಡಬೇಕು. ಇಂದಿನ ಯಾವ ರಾಜಕಾರಣಿಗಳಿಗೂ ನೈತಕತೆ ಎನ್ನುವುದಿಲ್ಲ. ತಮಿಳುನಾಡಿನಲ್ಲಿ ವಿಜಯ್ ಮೇಲೆ ಬಂದಹಾಗೆ ಕರ್ನಾಟಕದಲ್ಲೂ ಹೊಸ ಪಕ್ಷ ಅಧಿಕಾರಕ್ಕೆ ಬರಬೇಕು. ಕಾಕ್ರೋಚ್ ಪಾರ್ಟಿಗೆ ನನ್ನ ಬೆಂಬಲವಿದೆ. ಬಿಡದಿ ಟೌನ್ ಶಿಪ್ ವಿಚಾರಕ್ಕೆ ಸಂಬಂಧಿಸಿದಂತೆ ಮಾತನಾಡಿದ ಅವರು, ರಾಜ್ಯದಲ್ಲಿ ಟೌನ್ ಶಿಪ್ ಇದೇ ಮೊದಲಲ್ಲ, ಈ ಹಿಂದೆ ಹಲವಾರು ಟೌನ್ ಶಿಪ್ ಗಳು ಆಗಿವೆ. ಈಗ ರೈತರು ಎಷ್ಟು ಹಣ ಕೇಳುತ್ತಾರೆ ಅಷ್ಟು ಹಣ ನೀಡಿ ಅವರ ಮನವೊಲಿಸಿ ಟೌನ್ ಶಿಪ್ ನಿರ್ಮಾಣ ಮಾಡಬೇಕು. ಇದರಲ್ಲಿ ಒಣ,ಭೂಮಿ, ನೀರಾವರಿ ಭೂಮಿ ಎಂಬುದು ಬರುವುದಿಲ್ಲ ಎಂದು ಹೇಳಿದರು.

ಎಚ್.ವಿಶ್ವನಾಥ್ 55 ಲಕ್ಷ ಸಾಲ ಪಡೆದಿದ್ದಾರೆ ಎಂಬ ಕಾಂಗ್ರೆಸ್ ಮುಖಂಡ ಕೋಟೆ ಹುಂಡಿ ಮಹದೇವು ಅವರ ಹೇಳಿಕೆಗೆ ಗರಂ ಆದ ಎಚ್.ವಿಶ್ವನಾಥ್, ಕೋಟೆ ಹುಂಡಿ ಮಹದೇವು ನನ್ನ ಶಿಷ್ಯ, 55 ಲಕ್ಷ ನಾನು ಪಡೆದಿದ್ದೇನೆ ಎಂದ ಮೇಲೆ ದಾಖಲಾತಿ ತೋರಿಸಬೇಕಲ್ಲವೆ? ಒಬ್ಬ ಜವಾಬ್ದಾರಿಯುವ ನಾಯಕನ ಬಗ್ಗೆ ಯಾರೋ ಒಬ್ಬ ವ್ಯಕ್ತಿ ಆರೋಪ ಮಾಡಿದರು ಎಂದು ಮಾಧ್ಯಮದವರು ನನ್ನ ಬಗ್ಗೆ ತೋರಿಸಿವುದು ಸರಿಯಲ್ಲ, ನಾನು ಮಾಧ್ಯಮದಿಂದಲೇ ಬೆಳೆದವನು, ಈಗ ಅದೇ ಮಾಧ್ಯಮ ನನ್ನನ್ನು ಕೊಲೆ ಮಾಡುವುದೆ ಎಂದು ಕಿಡಿಕಾರಿದರು. ಬಿಜೆಪಿ ರಾಜ್ಯಧ್ಯಾಕ್ಷ ವಿಜಯೇಂದ್ರ ಬದಲಾವಣೆಗೆ ಸಂಬಂಧಿಸಿದಂತೆ ಮಾತನಾಡಿದ ಅವರು, ನಾನು ರಾಜ್ಯಧ್ಯಕ್ಷನನ್ನು ಬದಲಾವಣೆ ಮಾಡಬೇಕು ಎಂದು ಹೇಳುವುದಿಲ್ಲ. ಆದರೆ ವಿಜಯೇಂದ್ರ, ಆರ್.ಅಶೋಕ್ ಅವರ ಸಾಧನೆ ಏನು, ಮೂರು ವರ್ಷ ಆಡಳಿತ ನಡೆಸಿದ ಸಿದ್ಧರಾಮಯ್ಯ ಅವರ ಸಾಧನೆ ಏನು ಎಂದು ಕೇಳಿದರು.

### ದೇವಗೌಡರ ರಾಜ್ಯಸಭೆ ಕಳುಹಿಸಿ: ವಿಶ್ವನಾಥ್

ಮೈಸೂರು: ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರನ್ನು ರಾಜ್ಯಸಭಾ ಸದಸ್ಯರಾಗಿ ಮತ್ತೊಂದು ಅವಧಿಗೆ ಮುಂದುವರೆಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಆಗ್ರಹಿಸಿದರು. ಎಚ್.ಡಿ.ದೇವೇಗೌಡರು ಪಂಚಾಯಿತಿಯಿಂದ ಹಿಡಿದು ಪಾರ್ಲಿಮೆಂಟ್ ವರೆಗೆ ಹೋಗಿ ಈ ದೇಶದ ಪ್ರಧಾನಮಂತ್ರಿಯಾಗಿದ್ದಾರೆ. ಅವರಿಗೆ ಎಲ್ಲರ ಬೆಂಬಲ ದೊರೆತಯ ರಾಜ್ಯಸಭಾ ಸದಸ್ಯರನ್ನಾಗಿ ಮಾಡಿ ದೇಶದ ಬಗ್ಗೆ ಅವರ ಸಲಹೆಗಳನ್ನು ಪಡೆಯಬೇಕು ಎಂದು ಹೇಳಿದರು.

# ಶ್ರೀ ಯೋಗಾನರಸಿಂಹಸ್ವಾಮಿಯ ಕುಂಭಾಭಿಷೇಕ ಮಹೋತ್ಸವ

**ಮೈಸೂರು:** ವಿಜಯನಗರದಲ್ಲಿರುವ ಶ್ರೀ ಯೋಗಾ ನರಸಿಂಹಸ್ವಾಮಿ ದೇವಾಲಯದಲ್ಲಿ ಶ್ರೀ ಸ್ವಾಮಿಯ ಕುಂಭಾಭಿಷೇಕ ಮಹೋತ್ಸವ ಹಲವು ಧಾರ್ಮಿಕ ಕಾರ್ಯಗಳು ಹಾಗೂ ವಿಶೇಷ ಪೂಜಾ ಕೈಂಕರ್ಯಗಳೊಂದಿಗೆ ಸೋಮವಾರದಿಂದ ಆರಂಭಗೊಂಡಿದೆ.



ಬೆಳಗ್ಗಿನಿಂದಲೇ ದೇವಾಲಯದ ಸಂಸ್ಥಾಪಕರಾದ ನಾಡೋಜ ಪ್ರೊ.ಡಾ. ಭಾಷ್ಯಂ ಸ್ವಾಮೀಜಿಯವರ ನೇತೃತ್ವದಲ್ಲಿ ಪೂಜಾ ಕಾರ್ಯಗಳು ನಡೆಯಿತಲ್ಲದೇ, ದೇವಾಲಯಕ್ಕೆ ಆಗಮಿಸಿ ಶ್ರೀ ಸ್ವಾಮಿಯ ದರ್ಶನ ಪಡೆದ ಭಕ್ತರಿಗೆ ಪ್ರಸಾದವನ್ನು ಸಹ ವಿತರಿಸಲಾಯಿತು. ಮೇ.25ರ ಸೋಮವಾರ ಬೆಳಗ್ಗೆ ಶ್ರೀ ಯೋಗಾನರಸಿಂಹಸ್ವಾಮಿಗೆ ಅಭಿಷೇಕ ಮತ್ತು ಲಕ್ಷಾರ್ಚನೆ ಕಾರ್ಯಗಳು ಜರುಗಿದ್ದು, ಬಳಿಕ ಮಹಿಳಾ ಸಂಘದವರಿಂದ ಲಲಿತಾ ಸಹಸ್ರನಾಮ ಪಾರಾಯಣ ನಡೆಯಿತು. ಮೇ.26ರ ಮಂಗಳವಾರ ಬೆಳಗ್ಗೆ 9 ಗಂಟೆಗೆ ಶ್ರೀ ಯೋಗಾ ನರಸಿಂಹ ಸ್ವಾಮಿಯವರಿಗೆ ಸಹಸ್ರ ಕಳಶಾಭಿಷೇಕ ಮತ್ತು ಮಹಿಳಾ ಸಂಘದವರಿಂದ ಸೌಂದರ್ಯ ಲಹರಿ ಪಾರಾಯಣ ನಡೆಯಲಿದೆ. ಹಾಗೇಯೇ ಮೇ.27ರ ಬುಧವಾರ ಬೆಳಗ್ಗೆ 9 ಗಂಟೆಗೆ ಶ್ರೀ ಯೋಗಾನರಸಿಂಹಸ್ವಾಮಿಗೆ ಕುಂಭಾಭಿಷೇಕ ಮತ್ತು ಅಖಂಡ ಮಹಾ ಸುದರ್ಶನ ಹೋಮ ಜರುಗಲಿದ್ದು, ತದನಂತರ ಮಹಿಳಾ ಸಂಘದವರಿಂದ ವಿಷ್ಣು ಸಹಸರನಾಮ ಪಾರಾಯಣ ಜರುಗಲಿದೆ. ಅಂತೆಯೇ ಬಳಿಕ ಮಧ್ಯಾಹ್ನ 12ಗಂಟೆಗೆ ಪೂರ್ಣಾಹುತಿ ನಡೆಯಲಿದ್ದು, 12.30ರನಂತರ ಭಕ್ತರಿಗೆ ಅನ್ನ ಸಂತರ್ಪಣೆ ನಡೆಯಲಿದೆ ಎಂದು ದೇವಾಲಯದ ಆಡಳಿತಾಧಿಕಾರಿ ಎನ್.ಶ್ರೀನಿವಾಸನ್ ತಿಳಿಸಿದರು.

# ಟ್ರಾನ್ಸ್‌ಫಾರ್ಮರ್‌ಗಳ ತುರ್ತು ನಿರ್ವಹಣೆಗೆ ಸೆಸ್ಕ್ ಸಜ್ಜು

**ಮೈಸೂರು:** ಗ್ರಾಹಕರಿಗೆ ಅಡಚಣೆರಹಿತ ವಿದ್ಯುತ್ ಪೂರೈಕೆ ಮಾಡುವ ಉದ್ದೇಶದಿಂದ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ(ಸೆಸ್ಕ್) ಅಗತ್ಯ ಕ್ರಮವಹಿಸಿದೆ. ಇದಕ್ಕಾಗಿ ಪ್ರತಿಯೊಂದು ತಾಲೂಕುಗಳಲ್ಲಿ ವಿದ್ಯುತ್ ಪರಿವರ್ತಕಗಳ ಬ್ಯಾಂಕ್ ಸ್ಥಾಪಿಸಿ, ಹೆಚ್ಚುವರಿ ಟ್ರಾನ್ಸ್‌ಫಾರ್ಮರ್‌ಗಳನ್ನು ಸಂಗ್ರಹಿಸಿಕೊಳ್ಳಲಾಗಿದೆ.

ಸೆಸ್ಕ್ ವ್ಯಾಪ್ತಿಗೆ ಒಳಪಡುವ ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು ಹಾಗೂ ಹಾಸನಜಿಲ್ಲೆಗಳ ಎಲ್ಲಾ ತಾಲೂಕುಗಳಲ್ಲಿರುವ ಟ್ರಾನ್ಸ್‌ಫಾರ್ಮರ್‌ಗಳ ಸಂಖ್ಯೆಗೆ ಅನುಗುಣವಾಗಿ ಹೆಚ್ಚುವರಿ ಟ್ರಾನ್ಸ್‌ಫಾರ್ಮರ್‌ಗಳನ್ನು ನಿಗಮದ ವಿವಿಧ ದಾಸ್ತಾನು ಕೇಂದ್ರಗಳಲ್ಲಿ ಬಫರ್ ಸ್ಟಾಕ್‌ಗಳನ್ನು ಸಂಗ್ರಹಿಸಿ ಇರಿಸಲಾಗಿದೆ. ಇದರಿಂದ ತಾಲೂಕಿನ ಯಾವುದೇ ಪ್ರದೇಶದಲ್ಲಿರುವ ವಿದ್ಯುತ್ ಪರಿವರ್ತಕಗಳಲ್ಲಿ ದೋಷ ಉಂಟಾದರೂ ತ್ವರಿತವಾಗಿ ಬದಲಾವಣೆ ಅಥವಾ ದುರಸ್ತಿ ಕಾರ್ಯಕೈಗೊಳ್ಳಲು ಅನುಕೂಲವಾಗಲಿದೆ ಎಂದು ಹೇಳಿದ್ದಾರೆ.

**ಜಿಲ್ಲಾವಾರು ಸಹಾಯವಾಣಿ ಸಂಖ್ಯೆ**
ಕೊಡಗು – 18005990061
ಮೈಸೂರು – 18005990062
ಚಾಮರಾಜನಗರ ? 18005990063
ಮಂಡ್ಯ – 18005990064
ಹಾಸನ – 18005990065

ಮುಂದಿನ ದಿನಗಳಲ್ಲಿ ಮುಂಗಾರು ಕೂಡ ಆರಂಭವಾಗುತ್ತಿರುವ ಹಿನ್ನೆಲೆಯಲ್ಲಿ ಮಳೆ ಹಾಗೂ ಗಾಳಿಯಿಂದಾಗಿ ಕೆಲವು ಕಡೆಗಳಲ್ಲಿ ಟ್ರಾನ್ಸ್‌ಫಾರ್ಮರ್‌ಗಳಿಗೆ ಹಾನಿಯಾಗುವ ಸಾಧ್ಯತೆಯೂ ಹೆಚ್ಚಾಗಿರುವುದರಿಂದ, ಅವುಗಳನ್ನು ಶೀಘ್ರವಾಗಿ ದುರಸ್ತಿ ಮಾಡಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗದಂತೆ ಕ್ರಮವಹಿಸಲು ಸೆಸ್ಕ್ ಸನ್ನದ್ಧವಾಗಿದೆ. ಆದ್ದರಿಂದ ಸಾರ್ವಜನಿಕರು ಮತ್ತು ರೈತರು ಟ್ರಾನ್ಸ್‌ಫಾರ್ಮರ್‌ಗಳಲ್ಲಿ ದೋಷ ಕಂಡುಬಂದಲ್ಲಿ ತಕ್ಷಣವೇ *ಸೆಸ್ಕ್ 24*7 ಸಹಾಯವಾಣಿ 1912* ಅಥವಾ ಸಮೀಪದ ಸೇವಾ ಕೇಂದ್ರಗಳಿಗೆ ಮಾಹಿತಿ ನೀಡಬಹುದಾಗಿದೆ. ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ(ಸೆಸ್ಕ್) ವ್ಯಾಪ್ತಿಯಲ್ಲಿನ ನಗರ ಅಥವಾ ಗ್ರಾಮೀಣ ಪ್ರದೇಶಗಳ ಗ್ರಾಹಕರು ಯಾವುದೇ ವಿದ್ಯುತ್ ಸಂಪರ್ಕದ ಮಾಹಿತಿಗಾಗಿ ಚಾವಿಸನಿನಿ(ಸೆಸ್ಕ್) ಉಪವಿಭಾಗ/ವಿಭಾಗದ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ.

# ಒಕ್ಕಲಿಗ ಸಮಾಜಕ್ಕೆ ಹೆಚ್.ಡಿ.ದೇವೇಗೌಡರ ಕೊಡುಗೆ ಅಪಾರ: ಜಿ.ಟಿ.ದೇವೇಗೌಡ



**ಮೈಸೂರು:** ರಾಜ್ಯದಲ್ಲಿ ಈವರೆಗೆ ಮುಖ್ಯಮಂತ್ರಿಗಳಾಗಿ ಆಡಳಿತ ನಡೆಸಿರುವ ಒಕ್ಕಲಿಗ ಸಮುದಾಯದ ನಾಯಕರು, ಯಾವುದೇ ಕಪ್ಪುಚುಕ್ಕೆ ಇಲ್ಲದಂತೆ ಕಾರ್ಯನಿರ್ವಹಿಸಿರುವುದು ಸಮಾಜಕ್ಕೆ ಹೆಮ್ಮೆ ಎಂದು ಶಾಸಕ ಜಿ.ಟಿ.ದೇವೇಗೌಡರು ಹೇಳಿದರು.

ದಕ್ಷಿಣ ಕನ್ನಡ ಜಿಲ್ಲೆ, ಸುಳ್ಯದ ಕೊಡಿಯಾಲಬೈಲು ಗೌಡ ಸಮುದಾಯ ಭವನದಲ್ಲಿ ಗೌಡ ಯುವಸೇವಾ ಸಂಘ ಹಾಗೂ ಗೌಡ ಸಮುದಾಯ ಭವನ ನಿರ್ವಹಣಾ ಸಮಿತಿ ಸಹಯೋಗದಲ್ಲಿ ಆಯೋಜಿಸಿದ್ದ ಲಕ್ಷ್ಮೀ ಸಹಿತ ಸತ್ಯನಾರಾಯಣ ದೇವರ ಪೂಜೆ, ವಧು–ವರರ ನೂತನ ಗೃಹ ಉದ್ಘಾಟನೆ ಹಾಗೂ ಸಹಕಾರಿ ರತ್ನ ಪ್ರಶಸ್ತಿ ಪುರಸ್ಕೃತ ಪಿ.ಸಿ.ಜಯರಾಮ ಅವರ ಸನ್ಮಾನ ಸಮಾರಂಭದಲ್ಲಿ ಮಾತನಾಡಿದ ಅವರು, ಹಳ್ಳಿಯಲ್ಲಿ ಹುಟ್ಟಿ–ಬೆಳೆದ ಹೆಚ್.ಡಿ.ದೇವೇಗೌಡರು ರಾಜ್ಯದ ಮುಖ್ಯಮಂತ್ರಿಯಾಗಿ, ದೇಶದ ಪ್ರಧಾನಿಯಾಗಿ ಅಪಾರ ಕೊಡುಗೆ ನೀಡಿದರು. ಕೆಂಗಲ್ ಹನುಮಂತಯ್ಯ ವಿಧಾನಸೌಧ, ಎಸ್.ಎಂ.ಕೃಷ್ಣ ಅವರು ವಿಕಾಸಸೌಧ ಕಟ್ಟಿದರು. ಡಿ.ವಿ.ಸದಾನಂದಗೌಡ, ಹೆಚ್.ಡಿ.ಕುಮಾರಸ್ವಾಮಿ ತಮ್ಮದೇ ಆದ ರೀತಿಯಲ್ಲಿ ಆಡಳಿತ ನಡೆಸಿ, ಜನ ಮೆಚ್ಚುಗೆ ಪಡೆದರು ಎಂದರು.

ಸಹಕಾರಿಗಳು ಸಮಾಜ ಸೇವೆಯಲ್ಲಿ ನಿರಂತರವಾಗಿ ತೊಡಗಿಸಿಕೊಂಡು ಬಂದಿರುವುದು ಸಂತೋಷದ ಸಂಗತಿ. ಸಮಾಜಕ್ಕೆ ಸೇವೆ ಸಲ್ಲಿಸುವ ನಿಟ್ಟಿನಲ್ಲಿ ಒಗ್ಗಟ್ಟು ಕಾಪಾಡಿಕೊಂಡಿರುವುದು ಶ್ಲಾಘನೀಯ. ಸಮಾಜದ ಕೆಲಸ ಎಂದರೆ ಅನೇಕರು ಸ್ವಾರ್ಥಿಗಳಾಗುತ್ತಾರೆ. ಆದರೆ, ಡಾ.ವೆಂಕಟರಮಣಗೌಡರು, ರೇಣುಕಾ ಪ್ರಸಾದ್ ಅವರೊಂದಿಗೆ ಎಲ್ಲರೂ ಕೈಜೋಡಿಸಿರುವುದು ಅನುಕರಣೀಯ ಎಂದು ಅಭಿಪ್ರಾಯಿಸಿದರು.

ಸುಳ್ಯ ಭಾಗದಲ್ಲಿ ನರ್ಸಿಂಗ್ ಕಾಲೇಜು, ಪಾಲಿಟೆಕ್ನಿಕ್ ಕಾಲೇಜು ಆರಂಭಿಸಲಾಗಿದೆ. ವೈದ್ಯಕೀಯ ಕಾಲೇಜಿನ ಮೂಲಕ ಬಡ ಮತ್ತು ಮಧ್ಯಮ ವರ್ಗದ ಮಕ್ಕಳಿಗೆ ಅವಕಾಶ ಕಲ್ಪಿಸಲಾಗಿದೆ. ಹಳ್ಳಿಯ ರೈತರ ಮಕ್ಕಳು ವಿದ್ಯಾವಂತರಾಗಬೇಕು, ವೈದ್ಯ ಕೀಯ ಶಿಕ್ಷಣ ಪಡೆಯಬೇಕೆಂಬ ಅಭಿಲಾಷೆಯಿಂದ ಡಾ.ಬಾಲ ಗಂಗಾಧರನಾಥ ಸ್ವಾಮೀಜಿ ಬೆಳ್ಳೂರು ಬಳಿ ಮೆಡಿಕಲ್ ಕಾಲೇಜು ಸ್ಥಾಪಿಸಿದರು. ಆ ಸಂಸ್ಥೆಯನ್ನು ಇಂದಿನ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯುವ ಕೆಲಸ ಮಾಡುತ್ತಿದ್ದಾರೆ ಎಂದು ಬಣ್ಣಿಸಿದರು.

ಸರ್ವರ ಒಳಿತಿಗಾಗಿ ಆಯೋಜಿಸಿರುವ ಸತ್ಯನಾರಾಯಣ ಪೂಜೆಯಲ್ಲಿ ಭಾಗವಹಿಸಿರುವುದು ಸಂತಸ ತಂದಿದೆ. ಇಂತಹ ಸತ್ಕಾರ್ಯಗಳು ನಿರಂತರವಾಗಿ ನಡೆಯಬೇಕು. ಈ ಸಮಾರಂಭದಲ್ಲಿ ಐದು ದಶಕ ದಾಂಪತ್ಯ ಜೀವನ ನಡೆಸಿದ ದಂಪತಿಗಳನ್ನು ಅಭಿನಂದಿಸುವ ಮೂಲಕ ಮುಂದಿನ ಸುಖಕರ ಜೀವನಕ್ಕೆ ಆಶಿಸುತ್ತಿರುವುದು ಮಾದರಿಯಾಗಿದೆ ಎಂದರು.

ಒಕ್ಕಲಿಗ ಸಮುದಾಯ ಒಕ್ಕಣೆ ಮಾಡುವಾಗ ಪೂಜೆ ಮಾಡುವ ಮೂಲಕ ಸಮಾಜದ ಎಲ್ಲರನ್ನೂ ಒಟ್ಟಿಗೆ ಕರೆದೊಯ್ಯುತ್ತದೆ. ಹಾಗೆಯೇ ನೀವು ಸ್ವಾಭಿಮಾನಿಗಳು, ಗಟ್ಟಿಯಾಗಿದ್ದೀರಿ. ಸಂಖ್ಯೆಯಲ್ಲಿ ಕಡಿಮೆಯಿದ್ದರೂ ಶ್ರದ್ಧೆ, ಗೌರವ, ಭಕ್ತಿ ಮುಖ್ಯ ಎಂಬ ಸಂದೇಶ ಸಾರಿದ್ದೀರಿ. ಮಕ್ಕಳಿಗೆ ಶಿಕ್ಷಣದ ಜತೆಗೆ ಸಂಸ್ಕಾರ ಕಲಿಸುವ ಮೂಲಕ ಸಮಾಜದ ಪರಂಪರೆ, ಇತಿಹಾಸ ಉಳಿಸುವ ಕೆಲಸವಾಗಬೇಕು ಎಂದು ಆಶಿಸಿದರು.

ಕಾರ್ಯಕ್ರಮದಲ್ಲಿ ರಾಜ್ಯ ಒಕ್ಕಲಿಗರ ಸಂಘದ ಉಪಾಧ್ಯಕ್ಷರಾದ ಡಾ.ರೇಣುಕಾ ಪ್ರಸಾದ್, ಡಾ.ಜ್ಯೋತಿ ಪ್ರಸಾದ್, ಗೌಡ ಯುವ ಸೇನಾ ಅಧ್ಯಕ್ಷ ಗಂಗಾಧರ್, ಸಹಕಾರಿ ರತ್ನ ಪಿ.ಸಿ.ಜಯರಾಮ್, ಜೆಡಿಎಸ್ ಜಿಲ್ಲಾಧ್ಯಕ್ಷ ಜಾಕಿ ಮಾಧವಗೌಡ, ಪ್ರವೀಣ್ ಮತ್ತಿತರರು ಇದ್ದರು.

# ಶಿಕ್ಷಣದಿಂದ ಉತ್ತಮ ಸಮಾಜ

## ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಲು ಇಕ್ಬಾಲ್ ಹುಸೇನ್ ಕರೆ


**ರಾಮನಗರ:** ಪೋಷಕರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವುದರಿಂದ ಉತ್ತಮ ಸಮಾಜದ ನಿರ್ಮಾಣದ ಸಾಧ್ಯ ಎಂದು ರಾಮನಗರ ವಿಧಾನಸಭಾ ಕ್ಷೇತ್ರದ ಶಾಸಕರಾದ ಎಚ್.ಎ. ಇಕ್ಬಾಲ್ ಹುಸೇನ್ ಅವರು ಅಭಿಪ್ರಾಯಪಟ್ಟರು.

ಅವರು ಮೇ. 25ರ ಸೋಮವಾರ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಹಾಗೂ ರಾಮನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವತಿಯಿಂದ 2025–26ನೇ ಶೈಕ್ಷಣಿಕ ಸಾಲಿನ ಸಾಂಸ್ಕೃತಿಕ, ಕ್ರೀಡಾ ಎನ್.ಸಿ.ಸಿ., ಎನ್.ಎಸ್.ಎಸ್, ರೆಡ್‌ಕ್ರಾಸ್, ರೆಡ್‌ರಿಬ್ಬನ್, ರೋವರ್ಸ್ ಮತ್ತು ರೇಂಜರ್ಸ್ ಹಾಗೂ ಇತರೆ ಚಟುವಟಿಕೆಗಳ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಸಮಾಜದಲ್ಲಿ ಸಹಸ್ರಾರು ಜನ ಹುಟ್ಟುತ್ತಾರೆ, ಸಾಯುತ್ತಾರೆ, ಆದರೆ ಕೆಲವರು ಮಾತ್ರ ಇತಿಹಾಸದಲ್ಲಿ ಅಮರರಾಗಿರುತ್ತಾರೆ. ಒಂದು ಮಗುವಿಗೆ ಚೆನ್ನಾಗಿ ಅಕ್ಷರ ಕಲಿಸಿದರೆ ಅದೇ ನಿಜವಾದ ಪುಣ್ಯ, ವಿದ್ಯಾರ್ಥಿಗಳು ತಮ್ಮ ಶಿಕ್ಷಣದ ವೇಳೆಯಲ್ಲಿ ಮೊಬೈಲ್ ಬಳಕೆಯನ್ನು ಸಾಧ್ಯವಾದಷ್ಟು ಕಡಿಮೆ ಮಾಡಬೇಕು, ಅಗತ್ಯವಿದ್ದಾಗ ಮಾತ್ರ ಮೊಬೈಲ್ ಉಪಯೋಗಿಸಬೇಕು. ನಿಯಮಿತವಾಗಿ ಮಕ್ಕಳು ವ್ಯಾಯಾಮವನ್ನು ಅಭ್ಯಾಸ ಮಾಡಿದರೆ ಮಾನಸಿಕ ಹಾಗೂ ದೈಹಿಕವಾಗಿ ಆರೋಗ್ಯ ಕಾಪಾಡಿಕೊಳ್ಳಬಹುದು ಎಂದರು.

ಇದೇ ಸಂದರ್ಭದಲ್ಲಿ ಎನ್.ಸಿ.ಸಿ., ಎನ್.ಎಸ್.ಎಸ್ ರೆಡ್‌ಕ್ರಾಸ್, ರೆಡ್‌ರಿಬ್ಬನ್, ರೋವರ್ಸ್, ರೇಂಜರ್ಸ್, ಕುಸ್ತಿ ಹಾಗೂ ಹಗ್ಗಜಗ್ಗಾಟದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿ, ಸನ್ಮಾನಿಸಲಾಯಿತು.

ಸಾಹಿತಿ, ರಂಗಕರ್ಮಿ ಹಾಗೂ ಜಾನಪದ ವಿದ್ವಾಂಸರಾದ ಡಾ. ಎಂ. ಬೈರೇಗೌಡ, ಸಮರ್ಥನಂ ಅಂಗವಿಕಲರ ಟ್ರಸ್ಟ್ ಸಂಸ್ಥಾಪಕರಾದ ಡಾ. ಮಹಾಂತೇಶ್ ಘಟಿವಾಳಪ್ಪ ಕಿವಡಸಣ್ಣವರ, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಮೇಜರ್ ಡಾ. ಲಕ್ಷ್ಮೀ ಟಿ., ಐ.ಕ್ಯೂ. ಎ.ಸಿ ಸಂಚಾಲಕರಾದ ಡಾ. ದೀಪ. ಆರ್ ಹೆಬ್ಬಾರ್, ದೈಹಿಕ ಶಿಕ್ಷಣ ನಿರ್ದೇಶಕರಾದ ಶಿವಕುಮಾರ್, ರೆಡ್‌ಕ್ರಾಸ್ ಮತ್ತು ರೆಡ್‌ರಿಬ್ಬನ್ ಸಂಚಾಲಕರಾದ ಗಾಯತ್ರಿ ಸೇರಿದಂತೆ ಬೋಧಕ ಸಿಬ್ಬಂದಿ, ಉಪನ್ಯಾಸಕರು, ಬೋಧಕೇತರ ಸಿಬ್ಬಂದಿ, ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರು ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



# ಸಮಾಜ ಸೇವಕರಿಗೆ ಸನ್ಮಾನ ಇನ್ನಷ್ಟು ಸೇವೆಗೆ ಉತ್ತೇಜನ: ಡಾ.ಡಿ. ನಟರಾಜು



**ಕೆ.ಆರ್.ನಗರ: ಸಮಾಜಕ್ಕಾಗಿ** ಸೇವೆ ಸಲ್ಲಿಸುತ್ತಿರುವವರನ್ನು ಗುರುತಿಸಿ ಸನ್ಮಾನಿಸಿ ಪ್ರೋತ್ಸಾಹಿಸಿದಾಗ ಅವರು ಇನ್ನಷ್ಟು ಉತ್ಸಾಹದಿಂದ ಕೆಲಸ ಮಾಡಲು ಸಾಧ್ಯವಾಗುತ್ತದೆ ಎಂದು ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಹಾಗೂ ವೈದ್ಯಾಧಿಕಾರಿ ಡಾ.ಡಿ. ನಟರಾಜು ಹೇಳಿದರು.

ಪಟ್ಟಣದ ಸರ್ಕಾರಿ ನೌಕರರ ಭವನದಲ್ಲಿ ಸೃಜನ ಲೇಖಕರು ಮತ್ತು ಕಲಾವಿದರ ಬಳಗದ 23ನೇ ವರ್ಷದ ವಾರ್ಷಿಕೋತ್ಸವ ಹಾಗೂ ವಿಚಾರ ಪ್ರಜ್ಞೆ ಪಾಕ್ಷಿಕ ಪತ್ರಿಕೆಯ 8ನೇ ವರ್ಷದ ವಾರ್ಷಿಕೋತ್ಸವ ಅಂಗವಾಗಿ ಆಯೋಜಿಸಿದ್ದ ಸೃಜನ ಸದ್ಭಾವನಾ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸರ್ಕಾರಿ ನೌಕರರು ಸದಾ ಸಮಾಜಮುಖಿಯಾಗಿ ಕೆಲಸ ಮಾಡಬೇಕು. ವಿವಿಧ ಕ್ಷೇತ್ರಗಳಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸುತ್ತಿರುವವರನ್ನು ಗುರುತಿಸಿ ಗೌರವಿಸುವ ಕಾರ್ಯವನ್ನು ಸೃಜನ ಬಳಗ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಮೂಳೆ ತಜ್ಞವೈದ್ಯ ಡಾ. ಕೆ.ಆರ್. ಗೌತಮ್ ಮಾತನಾಡಿ, ನಕರಾತ್ಮಕ ವಿಚಾರಗಳು ಬೇಗ ಗಮನ ಸೆಳೆಯುತ್ತವೆ. ಆದ್ದರಿಂದ ವಯಸ್ಸಿಗಿಂತ ವಿವೇಕದಲ್ಲಿ ಬೆಳೆಯಬೇಕು ಎಂದು ಹೇಳಿದರು. ಇತರರಿಗಾಗಿ ಬದುಕುವ ಮನೋಭಾವ ಬೆಳೆಸಿಕೊಂಡು, ಜೀವನದ ನಿಜವಾದ ಅರ್ಥವನ್ನು ಅರಿಯಬೇಕು ಎಂದರು.

ಸಾಲಿಗ್ರಾಮ ತಾಲೂಕು ಪಂಚಾಯಿತಿ ಇಒ ಎ.ಎನ್. ರವಿ ಮಾತನಾಡಿ, ಪತ್ರಿಕೆ ನಡೆಸುವುದು ದೊಡ್ಡ ಸಾಮಾಜಿಕ ಹೊಣೆಗಾರಿಕೆ. ಜನರಲ್ಲಿ ಓದುವ ಅಭಿರುಚಿ ಹಾಗೂ ಸಂಸ್ಕೃತಿ ಬೆಳೆಸುವಲ್ಲಿ ಪತ್ರಿಕೆಗಳ ಪಾತ್ರ ಮಹತ್ವದ್ದಾಗಿದೆ. ಈ ದಿಕ್ಕಿನಲ್ಲಿ ವಿಚಾರ ಪ್ರಜ್ಞೆ ಪತ್ರಿಕೆಯ ಪ್ರಯತ್ನ ಶ್ಲಾಘನೀಯ ಎಂದರು.

ಈ ಸಂದರ್ಭದಲ್ಲಿ ಪತ್ರಕರ್ತ ಕೆ.ಟಿ. ಮೋಹನ್ ಕುಮಾರ್, ನಿವೃತ್ತ ತಹಶೀಲ್ದಾರ್ ಕೆ.ಎಸ್. ಬಾಲಸುಬ್ರಮಣ್ಯ, ಡಾ. ಟಿ.ಎಸ್. ದೀಪ್ತಿ, ಪೊಲೀಸ್ ಪೇದೆ ಹೆಚ್.ಎಸ್. ವಿಜಯ್, ಪೌರಕಾರ್ಮಿಕ ರವಿ, ಪಶುವೈದ್ಯ ಹಿರಿಯ ಪರೀಕ್ಷಕ ಚಿಕ್ಕಣ್ಣೇಗೌಡ, ಅಂಗನವಾಡಿ ಕಾರ್ಯಕರ್ತೆ ಹೇಮಲತಾ, ಅಂಚೆ ನೌಕರ ಹರೀಶ್ ಕುಮಾರ್, ಪ್ರತಿಭಾವಂತ ವಿದ್ಯಾರ್ಥಿ ಎಸ್. ಕಿರಣ್, ಪ್ರಗತಿಪರ ರೈತ ಮಹಿಳೆ ಅನುಸೂಯ, ಈಜುಗಾರ ಪ್ರಸಾದ್, ಪುರೋಹಿತ ಮಹದೇವ ಸೇರಿದಂತೆ 32 ಮಂದಿ ವಿವಿಧ ಕ್ಷೇತ್ರಗಳ ಸಾಧಕರಿಗೆ ಸೃಜನ ಸದ್ಭಾವನಾ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಡಾ.ಬಿ.ಜೆ. ನವೀನ್ ಕುಮಾರ್, ಡಾ.ಪಿ. ಜನಾರ್ಧನ್ ಭಟ್, ಪೊಲೀಸ್ ಇನ್ಸ್‌ಪೆಕ್ಟರ್ ಎಸ್. ಶಿವಪ್ರಕಾಶ್, ಸೃಜನ ಬಳಗದ ಅಧ್ಯಕ್ಷ ರಾ. ಸುರೇಶ್, ಕೆ.ಇ. ಮಹೇಶ್, ಮಹೇಶ್ ಕುಮಾರ್, ತಿಮ್ಮಶೆಟ್ಟಿ, ಅಶೋಕ್ ಕುಮಾರ್, ಟಿ.ಎನ್. ದಯಾನಂದ, ಶ್ರೀನಿವಾಸಗೌಡ, ಪಿ.ಆರ್. ವಿಶ್ವನಾಥಶೆಟ್ಟಿ, ಕೃಷ್ಣ, ಹೆಗ್ಗಂದೂರು ಪ್ರಭಾಕರ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಸಂಕ್ಷಿಪ್ತ ಸುದ್ದಿ

### ಇಂದು ಅಧ್ಯಕ್ಷ ನಿಸಾರ್ ಅಹಮ್ಮದ್ ಮಂಡ್ಯ ಪ್ರವಾಸ

**ಮಂಡ್ಯ:** ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗ ಅಧ್ಯಕ್ಷರು ಇಂದು ಮಂಡ್ಯ ಜಿಲ್ಲೆಯಲ್ಲಿ ಪ್ರವಾಸ ಕಾರ್ಯಕ್ರಮವಿದೆ

ಅಧ್ಯಕ್ಷರಾದ ಯು. ನಿಸಾರ್ ಅಹಮದ್ ರವರು ಮೇ 26 ರಂದು ಬೆಳಿಗ್ಗೆ 11.30 ಗಂಟೆಗೆ ಜಿಲ್ಲಾಧಿಕಾರಿಗಳ ಸಭಾಂಗಣ ದಲ್ಲಿ ಜಿಲ್ಲಾ ಮಟ್ಟದ ಪ್ರಧಾನ ಮಂತ್ರಿಗಳ ಹೊಸ 15 ಅಂಶಗಳ ಕಾರ್ಯಕ್ರಮಕ್ಕೆ ಸಂಬಂಧಿಸಿದ ಜಿಲ್ಲಾ ಮಟ್ಟದ ಅಧಿಕಾರಿ ಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆಯಲ್ಲಿ ಭಾಗವಹಿಸಲಿದ್ದಾರೆ*

ನಂತರ ಮಧ್ಯಾಹ್ನ 3 ಗಂಟೆಡೆ ಸ್ಥಳೀಯ ಹಿಂದುಳಿದ, ಕೊಳಚೆ ಪ್ರದೇಶಗಳಲ್ಲಿರುವ ಅಂಗನವಾಡಿ ಮತ್ತು ಉರ್ದು ಶಾಲೆಗಳಿಗೆ ಭೇಟಿ ನೀಡಲಿದ್ದಾರೆ

### ಮೇ 27 ರಂದು ಕವಿ ಮೃತ್ಯುಂಜಯ ಕವನ ಸಂಕಲನ ಬಿಡುಗಡೆ

**ಮಂಡ್ಯ:** ಸ್ನೇಹ ಬಳಗದಿಂದ ಕವಿ ಕೆ.ಪಿ.ಮೃತ್ಯುಂಜಯ ಅವರ ಜಾಯ್ ಪದ್ಯಗಳು ಪುಸ್ತಕ ಲೋಕಾರ್ಪಣೆ ಮತ್ತು ಗೌರವಾರ್ಪಣೆ ಕಾರ್ಯಕ್ರಮವನ್ನು ಮೇ 27ರಂದು ಬೆಳಗ್ಗೆ 10 ಗಂಟೆಗೆ ನಗರದ ಕೆವಿಎಸ್ ಶತಮಾನೋತ್ಸವ ಭವನದಲ್ಲಿ ಆಯೋಜಿಸಲಾಗಿದೆ ಎಂದು ಮಂಡ್ಯ ತಾ.ಪಂ ಮಾಜಿ ಅಧ್ಯಕ್ಷ ಸಿ.ತ್ಯಾಗರಾಜು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಅವರು, ಕವಿ ಕೆ.ಪಿ.ಮೃತ್ಯುಂಜಯ ಅವರು ಉಪನ್ಯಾಸಕರಾಗಿ ನಿವೃತ್ತಿಯ ಹೊಸ್ತಿಲಿನಲ್ಲಿದ್ದಾರೆ. ಹಲವು ಪುಸ್ತಕಗಳನ್ನು ಬರೆದ ಅವರು ನಿವೃತ್ತಿಯ ಹಿನ್ನಲೆ ಈ ಪುಸ್ತಕ ಬಿಡುಗಡೆ ಮಾಡಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಕೃಷಿ ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಪುಸ್ತಕ ಬಿಡುಗಡೆ ಮತ್ತು ಕವಿಗೆ ಗೌರವ ಸಲ್ಲಿಸುವರು. ಶಾಸಕ ಪಿ.ರವಿಕುಮಾರ್ ಗೌಡ ಅಧ್ಯಕ್ಷತೆ ವಹಿಸುವರು. ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಗೌರವ ಅತಿಥಿಗಳಾಗಿ ಭಾಗವಹಿಸಲಿದ್ದು, ಇಂಗ್ಲೀಷ್ ಅಧ್ಯಾಪಕರು ಮತ್ತು ಬರಹಗಾರರಾದ ಪ್ರಸನ್ನಕುಮಾರ್ ಕೆರೆಗೋಡು ಪುಸ್ತಕದ ಕುರಿತು ಮಾತನಾಡುವರು. ಲೇಖಕ, ಕವಿ ಉಪನ್ಯಾಸಕ ಕೆ.ಪಿ.ಮೃತ್ಯುಂಜಯ ತಾ.ಪಂ ಮಾಜಿ ಅಧ್ಯಕ್ಷ ಸಿ.ತ್ಯಾಗರಾಜು ಗೌರವ ಉಪಸ್ಥಿತಿ ವಹಿಸುವರು ಎಂದು ಮಾಹಿತಿ ನೀಡಿದರು.

ಗೋಷ್ಠಿಯಲ್ಲಿ ಬಳಗದ ಸಿ.ಎಂ.ದ್ಯಾವಪ್ಪ, ಮಂಗಲ ಎಂ.ಯೋಗೇಶ್, ಡಿ.ದೇವರಾಜು ಹಿಂದುಳಿದ ವರ್ಗಗಳ ವೇದಿಕೆ ಅಧ್ಯಕ್ಷ ಎಲ್.ಸಂದೇಶ್, ಲಿಂಗಪ್ಪ ಇದ್ದರು.

### ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನ

**ರಾಮನಗರ:** ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಆಯ್ಕೆಯಾದ ಚನ್ನಪಟ್ಟಣ ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯ ಅಂಗನವಾಡಿ ಕಂ ಕ್ರೇಚ್ ಕೇಂದ್ರಗಳಾದ ಹಲಸಿನಮರದೊಡ್ಡಿ, ಇಂದಿರಾಕಾಟೇಜ್–2, ಅಭಿದ್ದುಮೊರ್ಹಲ್ಲಾ, ಟಿಪ್ಪುನಗರ–1, ಬೀಡಿಕಾಲೋನಿ–1 ಹಾಗೂ ಇಸ್ಲಾಂಪುರ ಇಲ್ಲಿ ಕಾರ್ಯನಿರ್ವಹಿಸಲು 6 ಕ್ರೇಚ್ ಕಾರ್ಯಕರ್ತೆಯರು ಮತ್ತು 6 ಕ್ರೇಚ್ ಸಹಾಯಕಿಯರ ಹುದ್ದೆಗಳನ್ನು ಭರ್ತಿ ಮಾಡಲು ಆಫ್ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ನಿಗಧಿತ ಅರ್ಜಿ ನಮೂನೆಯನ್ನು ಶಿಶು ಅಭಿವೃದ್ಧಿ ಯೋಜನಾ ಕಚೇರಿ, ನಂ, 4823, ಆ1, ಅಪ್ಪಾಜಿ ಕಾಂಪ್ಲೆಕ್ಸ್, ಚಾನಲ್ ರಸ್ತೆ (3ನೇ ಅಡ್ಡರಸ್ತೆ), ವಿವೇಕಾನಂದನಗರ, ಚನ್ನಪಟ್ಟಣ, ಬೆಂಗಳೂರು ದಕ್ಷಿಣ ಜಿಲ್ಲೆ. ಈ ಕಚೇರಿಯಲ್ಲಿ ಪಡೆದು 2026ರ ಜೂನ್ 24ರ ಸಂಜೆ 5.30ರೊಳಗೆ ಅರ್ಜಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ, ನಂ 4823 ಆ1, ಅಪ್ಪಾಜಿ ಕಾಂಪ್ಲೆಕ್ಸ್, ಚಾನಲ್ ರಸ್ತೆ (3ನೇ ಅಡ್ಡರಸ್ತೆ), ವಿವೇಕಾನಂದನಗರ, ಚನ್ನಪಟ್ಟಣ, ಬೆಂಗಳೂರು ದಕ್ಷಿಣ ಜಿಲ್ಲೆ–562159ಅನ್ನು ಸಂಪರ್ಕಿಸುವಂತೆ ಚನ್ನಪಟ್ಟಣ ತಾಲ್ಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶಾಂತಿ – ಸೌಹಾರ್ದತೆಯಿಂದ ಬಕ್ರೀದ್ ಹಬ್ಬ ಆಚರಿಸಿ: ಡಾ ಕುಮಾರ



**ಮಂಡ್ಯ:** ಮೇ 28 ರಂದು ತ್ಯಾಗ ಮತ್ತು ಬಲಿದಾನದ ಸಂಕೇತವಾದ ಬಕ್ರೀದ್ ಹಬ್ಬವನ್ನು ಜಾತಿ, ಮತ ಭೇದವಿಲ್ಲದೆ ಪರಸ್ಪರ ಶಾಂತಿ ಹಾಗೂ ಸೌಹಾರ್ದತೆಯಿಂದ ಆಚರಿಸಬೇಕು ಎಂದು ಜಿಲ್ಲಾಧಿಕಾರಿ ಡಾ ಕುಮಾರ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಬಕ್ರೀದ್ ಹಬ್ಬದ ಪ್ರಯುಕ್ತ ಹಮ್ಮಿಕೊಂಡಿದ್ದ ಸಾರ್ವಜನಿಕ ಶಾಂತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಹಿಂದೂ?ಮುಸ್ಲಿಂ ಬಾಂಧವರು ಒಗ್ಗಟ್ಟಾಗಿ ಬದುಕಬೇಕು. ಕಾನೂನು ಸುವ್ಯವಸ್ಥೆ ಕಾಪಾಡಲು ಪೊಲೀಸ್ ಇಲಾಖೆ ಸದಾ ಸಿದ್ಧವಾಗಿದ್ದು, ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಎಲ್ಲರೂ ಶಾಂತಿಯುತವಾಗಿ ಹಬ್ಬ ಆಚರಿಸಬೇಕು ಎಂದು ಮನವಿ ಮಾಡಿದರು.

ಹಬ್ಬದ ಸಂದರ್ಭದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವುದು ಎಲ್ಲರ ಜವಾಬ್ದಾರಿಯಾಗಿದ್ದು ಜಿಲ್ಲೆಗೆ ಯಾವುದೇ ಕಪ್ಪು ಚುಕ್ಕಿ ಬಾರದ ಹಾಗೇ ಬಕ್ರೀದ್ ಹಬ್ಬವನ್ನು ಜಿಲ್ಲೆಯಾದ್ಯಂತ ಅತ್ಯಂತ ಶಾಂತಿ, ಸೌಹಾರ್ದತೆ ಮತ್ತು ಧಾರ್ಮಿಕ ಶ್ರದ್ಧಾಭಕ್ತಿಗಳಿಂದ ಆಚರಿಸೋಣ ಎಂದು ಅವರು ತಿಳಿಸಿದರು.

ಶಾಂತಿಗೆ ಭಂಗ ತರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿ ಹರಡುವವರ ಮೇಲೂ ಕಾನೂನು ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ ವಿ.ಜೆ. ಶೋಭಾರಾಣಿ ಅವರು ಶಾಂತಿಗೆ ಭಂಗ ತರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ವಿವಿಧ ಸಂಘಟನೆಗಳ ಮುಖಂಡರು ಸಲಹೆಗಳನ್ನು ನೀಡಿದ್ದೀರಿ. ಅದರಂತೆ ಎಲ್ಲ ರೀತಿಯ ಪೂರ್ವಸಿದ್ಧತೆಯನ್ನು ಮಾಡಿಕೊಳ್ಳಲಾಗಿದೆ. ಸುರಕ್ಷತೆಗೆ ಅಗತ್ಯವಾದ ಎಲ್ಲ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದರು.

ಸಭೆಯಲ್ಲಿ ಉಪಸ್ಥಿತರಿದ್ದ ಹಿಂದೂ–ಮುಸ್ಲಿಂ ಧರ್ಮಗಳ ಮುಖಂಡರು ಮಾತನಾಡಿ, ಸೌಹಾರ್ದ ಪರಂಪರೆಯನ್ನು ಎತ್ತಿಹಿಡಿಯಲು ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆಯೊಂದಿಗೆ ಸಹಕರಿಸುವುದಾಗಿ ತಿಳಿಸಿದರು.

ಸಭೆಯಲ್ಲಿ ಡಿ.ವೈ.ಎಸ್.ಪಿ ಲಕ್ಷ್ಮೀ ನಾರಾಯಣ ಪ್ರಸಾದ್ ಜಿಲ್ಲೆಯ ಮುಸ್ಲಿಂ ಮತ್ತು ಹಿಂದೂ ಧರ್ಮದ ಮುಖಂಡರು ಸಭೆಯಲ್ಲಿ ಪಾಲ್ಗೊಂಡಿದ್ದರು.

# ಬಾಲಕಿಯರ ವಿದ್ಯಾರ್ಥಿನಿಲಯ ಬೇರೆ ಕಟ್ಟಡಕ್ಕೆ ಸ್ಥಳಾಂತರಕ್ಕೆ ಡಿಸಿ ಸೂಚನೆ



**ಮಂಡ್ಯ:** ಬಂದೀಗೌಡ ಬಡಾವಣೆಯಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಹಾಸ್ಟೆಲ್ ನ ವಿದ್ಯಾರ್ಥಿನಿಯರು ಕಳಪೆ ವಾತಾವರಣದಲ್ಲಿರುವ ಕಾರಣ ತಕ್ಷಣವೇ ಈ ಹಾಸ್ಟೆಲ್ ಅನ್ನು ಸುಸಜ್ಜಿತ ಹಾಗೂ ವಿಶಾಲವಾದ ಬೇರೆ ಕಟ್ಟಡಕ್ಕೆ ಸ್ಥಳಾಂತರಿಸುವಂತೆ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ ಕುಮಾರ ಸೂಚಿಸಿದರು.

ಉಪಲೋಕಾಯುಕ್ತ ನ್ಯಾಯಮೂರ್ತಿ ಬಿ. ವೀರಪ್ಪ ಮಂಡ್ಯದ ಬಂದೀಗೌಡ ಬಡಾವಣೆಯಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯಕ್ಕೆ ದಿಢೀರ್ ಭೇಟಿ ನೀಡಿದ್ದು, ಅಲ್ಲಿನ ಸಮಸ್ಯೆಗಳಿಗೆ ಅಗತ್ಯಕ್ರಮವಹಿಸಬೇಕು ಎಂದು ಸೂಚಿಸಿದ ಹಿನ್ನಲೆಯಲ್ಲಿ ಇಂದು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು.


ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರು ತಮ್ಮ ವ್ಯಾಪ್ತಿಯಲ್ಲಿ ಬರುವ ವಿದ್ಯಾರ್ಥಿನಿಲಯಕ್ಕೆ ಕಾಲ ಕಾಲಕ್ಕೆ ಭೇಟಿ ನೀಡಿ ಅಲ್ಲಿ ಬೇಕಾಗಿರುವ ಮೂಲಭೂತ ಸೌಕರ್ಯಗಳನ್ನು ಪರಿಶೀಲನೆ ಮಾಡಬೇಕು ಎಂದು ತಿಳಿಸಿದ ಜಿಲ್ಲಾಧಿಕಾರಿಗಳು ಮಂಡ್ಯದ ಬಂದೀಗೌಡ ಬಡಾವಣೆಯಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯದಲ್ಲಿ ಕಳೆಪೆ ವಾತಾವರಣ ಇರುವುದರಿಂದ ಹಾಸ್ಟೆಲ್ ಅನ್ನು ಒಂದು ವಾರದಲ್ಲಿ ಉತ್ತಮ ಕಟ್ಟಡಕ್ಕೆ ಸ್ಥಳಾಂತರಿಸಲು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಹಾಸ್ಟೆಲ್‌ನ ಪ್ರಥಮ ಚಿಕಿತ್ಸಾ ಪೆಟ್ಟಿಗೆ ಇರಬೇಕು.ಅಡುಗೆ ಕೋಣೆಯಲ್ಲಿ ಬೇಕಾಗುವ ಪರಿಕರಗಳಲ್ಲಿ ಕೊರತೆ ಆಗಬಾರದು ಹಾಗೂ ಗುಣಮಟ್ಟದ ಆಹಾರ ನೀಡಲು ಅಗತ್ಯಕ್ರಮವಹಿಸಬೇಕು ಎಂದು ಅವರು ತಿಳಿಸಿದರು.

ವಿದ್ಯಾರ್ಥಿಗಳಿಗೆ ಹಾಸ್ಟೆಲ್ ನಲ್ಲಿ ಸಮಸ್ಯೆಗಳಾದರೆ ಸಂಬಂಧಪಟ್ಟ ಹಾಸ್ಟೆಲ್ ವಾರ್ಡನ್ ಹಾಗೂ ಸಮಾಜ ಕಲ್ಯಾಣ ಅಧಿಕಾರಿಗಳೇ ಜವಾಬ್ದಾರರು ಆಗಲ್ಲಿದ್ದು ಅವರ ಶಿಸ್ತುಕ್ರಮ ಜರುಗಿಸುವುದಾಗಿ ಎಚ್ಚರಿಕೆ ನೀಡಿದ್ದಾರೆ.

ಸಭೆಯಲ್ಲಿ ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕರಾದ ಶ್ರೀನಿವಾಸ್ ಹಾಗೂ ವಿದ್ಯಾರ್ಥಿ ನಿಲಯದ ವಾರ್ಡನ್ ಗಳು ಉಪಸ್ಥಿತರಿದ್ದರು

## ಜೆಡಿಎಸ್ ಯುವ ಘಟಕ ಪದಾಧಿಕಾರಿಗಳ ಆಯ್ಕೆ



**ಕೆ ಆರ್ ಪೇಟೆ:** ಕ್ಷೇತ್ರದ ಜನಪ್ರಿಯ ಶಾಸಕ ಹೆಚ್ ಟಿ ಮಂಜು ಸಮ್ಮುಖದಲ್ಲಿ ಜೆಡಿಎಸ್ ತಾಲ್ಲೂಕು ಯುವ ಘಟಕ ಪದಾಧಿಕಾರಿಗಳ ಆಯ್ಕೆ.

ತಾಲ್ಲೂಕು ಜೆಡಿಎಸ್ ಯುವ ಘಟಕದ ಅಧ್ಯಕ್ಷ ವಡ್ಡರಹಳ್ಳಿ ವಡ್ಡರಹಳ್ಳಿ ಮಹದೇವೇ ಗೌಡ,ಉಪಾಧ್ಯಕ್ಷರಾಗಿ ಯತೀಶ್, ಕಾರ್ಯದರ್ಶಿ ಜೀವನ್,ಮಹಾ ಪ್ರಧಾನ ಕಾರ್ಯದರ್ಶಿಯಾಗಿ ರೆಬೆಲ್ ರವಿ, ಪ್ರಧಾನ ಕಾರ್ಯದರ್ಶಿ ದಬ್ಬೇಘಟ್ಟ ಅನಿಲ್,ಪ್ರಧಾನ ಕಾರ್ಯದರ್ಶಿ ಹೊಸಹೊಳಲು ಹರ್ಷ,ಸಂಘಟನಾ ಕಾರ್ಯದರ್ಶಿ ಮಾಚಗೋನಹಳ್ಳಿ ದಿಲೀಪ್ ಅವರಿಗೆ ನೇಮಕ ಆದೇಶ ಪತ್ರಗಳನ್ನು ವಿತರಣೆ ಮಾಡಲಾಯಿತು. ಟೌನ್ ಅಧ್ಯಕ್ಷರಾಗಿ ಗಜ ರವಿ ಕುಮಾರ್, ಎಸ್ಸಿ ಘಟಕ ಅಧ್ಯಕ್ಷರಾಗಿ ಕಿರಣ್ ಮಂಜುನಾಥ್ (ಅರ್ಜುನ್),ಶೀಳನೆರೆ ಹೋಬಳಿ ಅಧ್ಯಕ್ಷರಾಗಿ ರಾಜಘಟ್ಟ ವಿವೇಕ್,ಬೂಕನಕೆರೆ ಅಧ್ಯಕ್ಷರಾಗಿ ದೊಡ್ಡಗಾಡಿಗನಹಳ್ಳಿ ಸುನಿಲ್ ಕುಮಾರ್, ಕಾರ್ಯದರ್ಶಿ ಮೋಹನ್, ಸಂತೆಬಾಚಹಳ್ಳಿ ಹೋಬಳಿ ಅಧ್ಯಕ್ಷರಾಗಿ ದುದ್ದನಹಳ್ಳಿ ದನೇಶ್ ಗೌಡ,ಕಾರ್ಯದರ್ಶಿ ಆಟೋ ನಾಗರಾಜು ಯಲಾದಹಳ್ಳಿ,ಕಿಕ್ಕೇರಿ ಹೋಬಳಿ ಅಧ್ಯಕ್ಷರಾಗಿ ಅವಿನಾಶ್, ಕಾರ್ಯದರ್ಶಿ ಕಿರಣ್, ಪ್ರಧಾನ ಕಾರ್ಯದರ್ಶಿ ಮಧುಕುಮಾರ್,ಕಸಬಾ ಹೋಬಳಿ ಅಧ್ಯಕ್ಷರಾಗಿ ಕೊಮ್ಮೇನಹಳ್ಳಿ ಕೌಶಿಕ್,ಕಾರ್ಯದರ್ಶಿ ಪ್ರವೀಣ್, ಅಕ್ಕಿಹೆಬ್ಬಾಳು ಅಧ್ಯಕ್ಷರಾಗಿ ಯಶ್ವಂತ್,ಕಾರ್ಯದರ್ಶಿ ದಿಲೀಪ್, ಹೊಸಹೊಳಲು ಘಟಕ ಅಧ್ಯಕ್ಷರಾಗಿ ಗೋವರ್ಧನ,ಕಾರ್ಯದರ್ಶಿ ಜೀವನ್ ಗೌಡ, ಅಲ್ಪಸಂಖ್ಯಾತರ ವಿಭಾಗದ ತನ್ವೀರ್ ಪಾಷಾ ಅಲಂಬಾಡಿ ಕಾವಲು ಅವರಿಗೆ ನೇಮಕಾತಿ ಆದೇಶ ಪತ್ರಗಳನ್ನು ನೀಡಿ ಗೌರವಿಸಲಾಯಿತು.

# ಮಳವಳ್ಳಿ ತಾಲೂಕಿನಲ್ಲಿ ದೊಡ್ಡ ಭೂ ಹಗರಣ : ಅನ್ನದಾನಿ



**ಮಂಡ್ಯ:** ಉಪಲೋಕಾಯುಕ್ತ ನ್ಯಾಯಮೂರ್ತಿಗಳು ತಹಶೀಲ್ದಾರ್‌ಗೆ ಚೀಮಾರಿ ಹಾಕಿರುವುದು ಮಳವಳ್ಳಿ ತಾಲೂಕಿನಲ್ಲಿ ನಡೆದಿರುವ ಭಾರಿ ಭೂ ಹಗರಣ ಪ್ರಕರಣಕ್ಕೆ ಹಿಡಿದ ಕೈಗನ್ನಡಿಯಾಗಿದೆ ಎಂದು ಮಾಜಿ ಶಾಸಕ ಕೆ.ಅನ್ನದಾನಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿಂದು ಮಾತನಾಡಿದ ಅವರು, ಕ್ಷೇತ್ರದ ಮಾಜಿ ಶಾಸಕನಾಗಿ ಈ ಸಂಬಂಧ ಸಾಕಷ್ಟು ಬಾರಿ ಕ್ರಮ ವಹಿಸಲು ಮನವಿ ಮಾಡಿದ್ದೆ. ಆದರೆ ಯಾವುದೇ ಕ್ರಮ ಕೈಗೊಳ್ಳದ ಕಾರಣ ಸಿದ್ದಾಚಾರ್ ಅವರ ಮೂಲಕ ಲೋಕಾಯುಕ್ತರಿಗೆ ದೂರು ಸಲ್ಲಿಸಿದ್ದು, ಇದೀಗ ತಾಲೂಕು ಆಡಳಿತ ಭೂಗಳ್ಳರ ಪರವಾಗಿ ಕೆಲಸ ಮಾಡುತ್ತಿರುವುದು ಬೆಳಕಿಗೆ ಬಂದಿದೆ ಎಂದರು.

ಮಳವಳ್ಳಿ ತಾಲೂಕಿನ ಅಭಿವೃದ್ಧಿಗೆ ಜಿಲ್ಲಾಡಳಿತ ಹಾಗೂ ತಾಲೂಕು ಆಡಳಿತ ನಿರ್ಲಕ್ಷ್ಯ ವಹಿಸಿದ್ದು, ತಾಲೂಕಿನಲ್ಲಿ ಆಡಳಿತ ಯಂತ್ರ ಸಂಪೂರ್ಣ ಕುಸಿತವಾಗಿದ್ದು, ಇಲ್ಲಿನ ಭೂ ಹಗರಣಗಳಿಗೆ ಕುಮ್ಮಕ್ಕು ನೀಡುವಲ್ಲಿ ಮಾತ್ರ ಕೆಲಸ ಮಾಡುತ್ತಿದೆ. ಹಾಲಿ ಶಾಸಕರು ಯಾವುದೇ ಕ್ರಮ ಕೈಗೊಳ್ಳದೆ ಇರುವುದು ಹಲವು ಅನುಮಾನಕ್ಕೆ ಎಡೆ ಮಾಡಿಕೊಟ್ಟಿದೆ ಎಂದು ಹೇಳಿದರು.

ತಾಲೂಕಿನಲ್ಲಿ 305 ಎಕರೆ ಅಕ್ರಮ ಆರ್‌ಟಿಸಿ ವಜಾ ಸಂಬಂಧ ಯಾವುದೇ ಕ್ರಮ ಕೈಗೊಂಡಿಲ್ಲ. ಈ ಸಂಬಂಧ ವಿರೋಧ ಪಕ್ಷವಾಗಿ ದೂರಿದ್ದೇನೆ. ಇದೀಗ ಲೋಕಾಯುಕ್ತರು ಚೀಮಾರಿ ಹಾಕಿದ್ದಾರೆ. ಕೂಡಲೇ ಅಕ್ರಮ ಭೂಗಳ್ಳರ ಪರವಾಗಿ ಕೆಲಸ ಮಾಡುವ ಅಧಿಕಾರಿಗಳ ವಿರುದ್ಧ ಕ್ರಮ ವಹಿಸಬೇಕೆಂದು ಒತ್ತಾಯಿಸಿದರು.

ತಾಲೂಕು ಪಂಚಾಯಿತಿಯ ಆಡಳಿತ ನಿಷ್ಕ್ರಯಗೊಂಡಿದೆ. ಇಓ ಹಾಗೂ ತಾಲೂಕಿನ ಎಲ್ಲ ಆಡಳಿತಾಧಿಕಾರಿಗಳು ಸಾರ್ವಜನಿಕರ ಯಾವುದೇ ಕೆಲಸ ಮಾಡದೇ ಅಭಿವೃದ್ಧಿಯ ಕಡೆ ದಿವ್ಯ ನಿರ್ಲಕ್ಷ್ಯ ತೋರಿದ್ದಾರೆ. ಹಲಗೂರು ಗ್ರಾ.ಪಂ.ನಲ್ಲಂತೂ ಲಕ್ಷಾಂತರ ರೂ ಹಣ ದುರುಪಯೋಗವಾಗಿದೆ. ಎಂದು ಆರೋಪಿಸಿದರು.

ಪುರಸಭೆಯ ಆವರಣದಲ್ಲಿ ನಿರ್ಮಿಸಲಾದ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆ ಜಾಗದಲ್ಲಿ ಯಾವುದೇ ಅಭಿವೃದ್ಧಿ ಕಾಮಗಾರಿಗಳನ್ನು ಮಾಡಲಾಗಿಲ್ಲ, ಕೇಂದ್ರ ಸಚಿವರು ನೀಡಿದ 10 ಲಕ್ಷ ರೂ.ಗಳಲ್ಲಿ ಒಂದು ಕಾಪೌಂಡ್ ನಿರ್ಮಾಣವಾಗಿರುವುದು ಬಿಟ್ಟರೆ ಬೇರಾವ ಕೆಲಸಗಳನ್ನು ಮಾಡಲಾಗಿಲ್ಲ. 4 ವರ್ಷದಿಂದ ಅಭಿವೃದ್ಧಿ ಕಾಣದಿರುವುದಕ್ಕೆ ಹಾಲಿ ಶಾಸಕರ ದಿವ್ಯ ನಿರ್ಲಕ್ಷ್ಯವೇ ಕಾರಣ ಎಂದು ದೂರಿದರು.


ಮಳವಳ್ಳಿ ತಾಲೂಕು ಕಾವೇರಿ ಜಲಾನಯನ ಪ್ರದೇಶದ ಕೊನೆಯ ಭಾಗವಾಗಿದೆ. ಇಲ್ಲಿಗೆ ನೀರು ಒದಗಿಸುವಲ್ಲಿ ಶಾಸಕರು ವಿಫಲರಾಗಿದ್ದಾರೆ. ಈ ಭಾಗದ ಕಾಲುವೆಗಳ ಅವುಗಳ ದುರಸ್ಥಿ ಕಾರ್ಯ ಯಾವಾಗ ಆಗುತ್ತವೆ ಎಂಬ ಮಾಹಿತಿಯೂ ರೈತರಿಗೆ ನೀಡದೇ ನೀರನ್ನೂ ಒದಗಿಸದೇ ವಂಚನೆ ಮಾಡಲಾಗುತ್ತಿದೆ. ಜಲಜೀವನ್ ಮಿಷನ್ ಯೋಜನೆಯು ತಾಲೂಕಿನ ಯಾವ ಗ್ರಾಮದಲ್ಲೂ ಜಾರಿಯಾಗಿಲ್ಲ. ಇದಕ್ಕಾಗಿ ರಸ್ತೆ ಅಗೆದಿರುವುದನ್ನು ಸರಿಪಡಿಸಲಾಗಿಲ್ಲ ಎಂದು ಆರೋಪಿಸಿದರು.

ತಾಲೂಕಿನ ಕನಕಭವನ ಮತ್ತು ಬಸವ ಭವನ ನಿರ್ಮಾಣ ಮಾಡುವಲ್ಲಿ ಶಾಸಕರು ಮಲತಾಯಿ ಧೋರಣೆ ಅನುಸರಿಸುತ್ತಿದ್ದಾರೆ. ಕಳೆದ 3 ವರ್ಷಗಳಿಂದ ಕಾಮಗಾರಿ ಆರಂಭ ಮಾಡಲಿಲ್ಲ. ತಾಲೂಕಿನಲ್ಲಿ ಸಿಆರ್‌ಎಸ್ ನಿಧಿಯಿಂದ 8 ಬಸ್ ನಿಲ್ದಾಣಗಳನ್ನು ಸಂಬಂಧ ಕಾಮಗಾರಿಗೆ ಅಗತ್ಯ ಸಾಮಗ್ರಿಗಳು ರಸ್ತೆಯಲ್ಲಿ ಬಿದ್ದಿವೆ. ಲೋಕೋಪಯೋಗಿ ಇಲಾಖೆಯ ಇಂಜಿನಿಯರ್ ಆಕ್ಷೇಪದಿಂದ ಸ್ಥಗಿತಗೊಂಡಿದೆ. ಆಶ್ರಯ ಬಡಾವಣೆಯ ನಾಮಫಲಕ ಒಡೆದು ಅದರ ಅಭಿವೃದ್ಧಿಗೂ ಅಡ್ಡಗಾಲಿಡುವ ಮೂಲಕ ಹೊಟ್ಟೆಕಿಚ್ಚಿನ ರಾಜಕಾರಣ ಮಾಡಲಾಗುತ್ತಿದೆ ಎಂದು ಗಂಭೀರ ಆರೋಪ ಮಾಡಿದರು.

ಸಮಾಜಿಕ ಸಂಘಟನೆಗಳು, ಸಂಸ್ಥೆಗಳು ಸಾರ್ವಜನಿಕರ ಪರ ಕೆಲಸ ಮಾಡುವ ಸಂಬಂಧ ಪ್ರಶ್ನೆ ಮಾಡಿದರೆ ಸುಮೋಟೊ ಪ್ರಕರಣ ದಾಖಲಿಸುವಂತೆ ಶಾಸಕರು ಹೇಳಿಕೆ ನೀಡಿದ್ದಾರೆ. ತಾಲೂಕಿನಲ್ಲಿ ಸಾರ್ವಜನಿಕರ ಕೆಲಸ ಮಾಡಲು ಅಧಿಕಾರಿಗಳನ್ನು ಪ್ರಶ್ನೆ ಮಾಡುವುದೇ ಅಪರಾಧವಾಗಿದೆ. ಶಾಸಕರು ಈ ಕೂಡಲೇ ತಮ್ಮ ಹೇಳಿಕೆಯನ್ನು ಹಿಂಪಡೆಯಬೇಕೆಂದು ಆಗ್ರಹಿಸಿದರು.

ಗೋಷ್ಠಿಯಲ್ಲಿ ಜಿ.ಪಂ ಮಾಜಿ ಸದಸ್ಯ ಹನುಮಂತು, ಯುವ ಜೆಡಿಎಸ್ ತಾಲೂಕು ಅಧ್ಯಕ್ಷ ಚಂದಳ್ಳಿ ಶ್ರೀಧರ್, ಸಿದ್ದಾಚಾರ್, ಶಂಕರ್, ಚೇತನ್ ಇದ್ದರು.

# ಗುಂಡ್ಲುಪೇಟೆ ಕ್ವಾರಿಯಲ್ಲಿ ಮೃತದೇಹ ಪತ್ತೆ: ರಕ್ಷಣಾ ಕ್ರಮಕ್ಕೆ ಗ್ರಾಮಸ್ಥರ ಒತ್ತಾಯ



ಗುಂಡ್ಲುಪೇಟೆ ತಾಲೂಕಿನ ಮಡಹಳ್ಳಿ ಗ್ರಾಮದ ಗುಮ್ಮಕಲ್ಲು ಗುಡ್ಡದ ನಿಷೇಧಿತ ಕ್ವಾರಿಯ ನೀರಿನಲ್ಲಿ ಸೋಮವಾರ ವ್ಯಕ್ತಿಯೊಬ್ಬರ ಕೊಳೆತ ಸ್ಥಿತಿಯ ಮೃತದೇಹ ಪತ್ತೆಯಾದ ಘಟನೆ ಸ್ಥಳೀಯರಲ್ಲಿ ಆತಂಕ ಉಂಟುಮಾಡಿದೆ. ಘಟನೆಯ ಸುದ್ದಿ ತಿಳಿಯುತ್ತಿದ್ದಂತೆ ಸಾರ್ವಜನಿಕರು ನೂರಾರು ಸಂಖ್ಯೆಯಲ್ಲಿ ಸ್ಥಳಕ್ಕೆ ಆಗಮಿಸಿದರು.

ಸೋಮವಾರ ಬೆಳಿಗ್ಗೆ ದನಗಾಯಿಗಳು ಕ್ವಾರಿಯ ನೀರಿನಲ್ಲಿ ಮೃತದೇಹ ತೇಲುತ್ತಿರುವುದನ್ನು ಗಮನಿಸಿ ಮಾಹಿತಿ ನೀಡಿದರು. ಬಳಿಕ ಸ್ಥಳೀಯ ಈಜುಗಾರರ ಸಹಾಯದಿಂದ ಮೃತದೇಹವನ್ನು ನೀರಿನಿಂದ ಮೇಲಕ್ಕೆತ್ತಲಾಯಿತು. ನಂತರ ಮರಣೋತ್ತರ ಪರೀಕ್ಷೆಗಾಗಿ ಮೃತದೇಹವನ್ನು ಗುಂಡ್ಲುಪೇಟೆ ಸಾರ್ವಜನಿಕ ಆಸ್ಪತ್ರೆಗೆ ಸಾಗಿಸಲಾಯಿತು.

ಮೃತನ ಜೇಬಿನಲ್ಲಿ ದೊರೆತ ದಾಖಲೆಗಳ ಆಧಾರದ ಮೇಲೆ ಅವರನ್ನು ಹಂಗಳ ಗ್ರಾಮದ ಮಂಜು (55) ಎಂದು ಗುರುತಿಸಲಾಗಿದೆ. ಮರಣೋತ್ತರ ಪರೀಕ್ಷೆ ಬಳಿಕ ಮೃತದೇಹವನ್ನು ವಾರಸುದಾರರಿಗೆ ಹಸ್ತಾಂತರಿಸಲಾಗಿದೆ. ಈ ಸಂಬಂಧ ಗುಂಡ್ಲುಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

**ಕೌಟುಂಬಿಕ ಸಮಸ್ಯೆ ಶಂಕೆ:** ಮರದ ವ್ಯಾಪಾರ ನಡೆಸುತ್ತಿದ್ದ ಮಂಜು ಅವರಿಗೆ ಇತ್ತೀಚೆಗೆ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಂಡಿದ್ದವು. ಇದರಿಂದ ಕುಟುಂಬದಲ್ಲಿ ಅಸಮಾಧಾನಗಳು ಉಂಟಾಗಿದ್ದವು ಎನ್ನಲಾಗಿದ್ದು, ಈ ಕಾರಣದಿಂದ ಅವರು ಆತ್ಮಹತ್ಯೆ ಮಾಡಿಕೊಂಡಿರಬಹುದೆಂದು ಹಂಗಳ ಗ್ರಾಮಸ್ಥರು ಅನುಮಾನ ವ್ಯಕ್ತಪಡಿಸಿದ್ದಾರೆ.

**ಸುರಕ್ಷತಾ ಕ್ರಮಗಳ ಕೊರತೆ ಕುರಿತು ಆಕ್ರೋಶ:** ಗಣಿಗಾರಿಕೆ ನಿಯಮಾನುಸಾರ ಕ್ವಾರಿ ಪ್ರದೇಶದ ಸುತ್ತ ತಂತಿ ಬೇಲಿ ಹಾಕಬೇಕು. ಆದರೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳ ನಿರ್ಲಕ್ಷ್ಯದಿಂದ ಈ ನಿಯಮ ಜಾರಿಯಾಗಿಲ್ಲ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ಗುಡ್ಡಕುಸಿತದ ಹಿನ್ನೆಲೆ ಈ ಪ್ರದೇಶದಲ್ಲಿ ಗಣಿಗಾರಿಕೆ ನಿಷೇಧಿಸಲಾಗಿದೆ. ಆದರೂ ನಿರ್ಜನ ಪ್ರದೇಶವಾಗಿರುವುದರಿಂದ ವಿದ್ಯಾರ್ಥಿಗಳು ಮತ್ತು ಯುವಕರು ಇಲ್ಲಿ ಈಜಲು ಬರುತ್ತಿದ್ದಾರೆ. ಯಾವುದೇ ರಕ್ಷಣಾ ವ್ಯವಸ್ಥೆ ಇಲ್ಲದಿರುವುದು ಅಪಾಯಕ್ಕೆ ಕಾರಣವಾಗಿದೆ.

ಈ ಹಿನ್ನೆಲೆಯಲ್ಲಿ ಕ್ವಾರಿ ಪ್ರದೇಶದ ಸುತ್ತ ತಂತಿ ಬೇಲಿ ಅಥವಾ ತಡೆಗೋಡೆ ನಿರ್ಮಿಸಿ ಸಾರ್ವಜನಿಕರ ಪ್ರವೇಶವನ್ನು ನಿರ್ಬಂಧಿಸುವಂತೆ ಮಡಹಳ್ಳಿ ಗ್ರಾಮದ ಮಂಜುನಾಥ್, ಸಿದ್ದರಾಜು, ಬಸವಣ್ಣ, ಮಹದೇವಪ್ಪ, ಕುಮಾರ್, ಮೂರ್ತಿ ಸೇರಿದಂತೆ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

# ಜೆಡಿಎಸ್ ಬೆಂಬಲಿತ ದುರ್ಗಾಪ್ರಸಾದ್ ಅವಿರೋಧ ಆಯ್ಕೆ



**ಹಾಸನ:** ರಾಜೀನಾಮೆಯಿಂದ ತೆರವಾಗಿದ್ದ ಸಮೀಪದ ಬೂವನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಸ್ಥಾನಕ್ಕೆ ಜೆಡಿಎಸ್ ಬೆಂಬಲಿತ ದುರ್ಗಾಪ್ರಸಾದ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಅಧ್ಯಕ್ಷ ಸ್ಥಾನ ತೆರವಾದ ಹಿನ್ನೆಲೆಯಲ್ಲಿ ಸಂಘದ ಕಚೇರಿಯಲ್ಲಿ ಸೋಮವಾರ ನಡೆದ ಆಯ್ಕೆ ಪ್ರಕ್ರಿಯೆಯಲ್ಲಿ ದುರ್ಗಾಪ್ರಸಾದ್ ಅವರೇ ಏಕೈಕ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದರಿಂದ ಚುನಾವಣಾಧಿಕಾರಿ ಲೀಲಾ ಅವರು ಅವರನ್ನು ಅವಿರೋಧವಾಗಿ ಆಯ್ಕೆಯಾದವರಾಗಿ ಘೋಷಿಸಿದರು. ನೂತನ ಅಧ್ಯಕ್ಷರಾಗಿ ಆಯ್ಕೆಯಾದ ದುರ್ಗಾಪ್ರಸಾದ್ ಅವರನ್ನು ಸಂಘದ ನಿರ್ದೇಶಕರು, ಸದಸ್ಯರು ಹಾಗೂ ಸ್ಥಳೀಯರು ಅಭಿನಂದಿಸಿದರು. ಸಂಘದ ಅಭಿವೃದ್ಧಿ, ರೈತಪರ ಯೋಜನೆಗಳ ಪರಿಣಾಮಕಾರಿ ಅನುಷ್ಠಾನ ಹಾಗೂ ಸದಸ್ಯರ ಹಿತಾಸಕ್ತಿಗೆ ಆದ್ಯತೆ ನೀಡಿ ಕಾರ್ಯನಿರ್ವಹಿಸುವುದಾಗಿ ಅವರು ಈ ಸಂದರ್ಭದಲ್ಲಿ ಭರವಸೆ ವ್ಯಕ್ತಪಡಿಸಿದರು.

ನೂತನ ಅಧ್ಯಕ್ಷ ದುರ್ಗಾಪ್ರಸಾದ್ ಅವರನ್ನು ಸ್ಥಳೀಯ ಶಾಸಕ ಹೆಚ್.ಪಿ.ಸ್ವರೂಪ್ ಹಾಗೂ ಜಿಪಂ ಮಾಜಿ ಅಧ್ಯಕ್ಷ ಸ್ವಾಮಿಗೌಡ ಅಭಿನಂದಿಸಿದರು.

ಈ ವೇಳೆ ತಾಪಂ ಮಾಜಿ ಅಧ್ಯಕ್ಷ ಜಯರಾಂ, ಮಾಜಿ ಅಧ್ಯಕ್ಷ ಬಿ.ಆರ್. ಬೊಮ್ಮೇಗೌಡ, ಕರಿಯಯ್ಯ, ತುಳಸಿರಾಂ, ಉಪಾಧ್ಯಕ್ಷೆ ವಿಜಯಲಕ್ಷ್ಮಿ ಹಾಗೂ ನಿರ್ದೇಶಕರಾದ ಚರಣ್, ರವಿ, ಗಣೇಶ್, ಲಕ್ಷ್ಮಣ್, ಮಂಜುನಾಥ್ ಸೇರಿದಂತೆ ಇತರರು ಹಾಜರಿದ್ದರು.

# ಕಂಪ್ಯೂಟರ್ ಟ್ಯಾಲಿ ಉಚಿತ ತರಬೇತಿಗೆ ಅರ್ಜಿ ಆಹ್ವಾನ

**ರಾಮನಗರ:** ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಟ್ರಸ್ಟ್ ಮತ್ತು ಕೆನರಾ ಬ್ಯಾಂಕ್ನ ಸಹಯೋಗದಲ್ಲಿ ನಡೆಸುತ್ತಿರುವ ರುಡ್ಸೆಟ್ ಸಂಸ್ಥೆಯ ವತಿಯಿಂದ ಕಂಪ್ಯೂಟರ್ ಟ್ಯಾಲಿ ಕುರಿತ 38 ದಿನಗಳ ಉಚಿತ ತರಬೇತಿಯನ್ನು ಜೂನ್ 16 ರಿಂದ ಹಮ್ಮಿಕೊಳ್ಳಲಾಗಿದ್ದು, ಗ್ರಾಮೀಣ ಆಸಕ್ತ ನಿರುದ್ಯೋಗಿ ಯುವಕ–ಯುವತಿಯರು ಅರ್ಜಿ ಸಲ್ಲಿಸಬಹುದಾಗಿದೆ.

ಆಸಕ್ತರು 18 ರಿಂದ 50 ವರ್ಷ ವಯೋಮಾನದವರಾಗಿದ್ದು, ಕನ್ನಡ ಭಾಷೆ ಓದಲು ಮತ್ತು ಬರೆಯಲು ಬಲ್ಲವರಾಗಿರಬೇಕು. ಗ್ರಾಮೀಣ ಭಾಗದ ಬಿಪಿಎಲ್ ಕಾರ್ಡ್ ಹಾಗೂ ಆಧಾರ್ ಕಾರ್ಡ್ ಅನ್ನು ಕಡ್ಡಾಯವಾಗಿ ಹೊಂದಿರಬೇಕು.

ತರಬೇತಿಯ ಅವಧಿಯಲ್ಲಿ ಉಚಿತ ಊಟ ಮತ್ತು ವಸತಿ ನೀಡಲಾಗುವುದು ಹಾಗೂ ತರಬೇತಿಯ ಅವಧಿ ಪೂರ್ಣಗೊಂಡ ನಂತರ ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯದಿಂದ ಪ್ರಮಾಣಪತ್ರವನ್ನು ವಿತರಿಸಲಾಗುವುದು.

ಆಸಕ್ತರು ಅರ್ಜಿ ಸಲ್ಲಿಸಲು ಹಾಗೂ ಹೆಚ್ಚಿನ ಮಾಹಿತಿಗೆ ರುಡ್ಸೆಟ್ ಸಂಸ್ಥೆ, ಅರಿಶಿನಕುಂಟೆ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಅಥವಾ ಮೊಬೈಲ್ ಸಂಖ್ಯೆ: 9481506564, 9380162042, 9113880324 ಅನ್ನು ಸಂಪರ್ಕಿಸಬಹುದಾಗಿದೆ ಎಂದು ರುಡ್ಸೆಟ್ ಸಂಸ್ಥೆಯ ಬೆಂಗಳೂರು ಶಾಖೆಯ ನಿರ್ದೇಶಕರಾದ ರವಿಕುಮಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನಿಷ್ಠ ದೈವ ಭಕ್ತ... ಶರಣ ಸೊಡ್ಡಳ ಬಾಚರಸ



| ವೀಣಾ ಹೇಮಂತ್‌ಗೌಡ ಪಾಟೀಲ್

ಕಲ್ಯಾಣದ ಶಿವಶರಣರಲ್ಲಿ ಸೊಡ್ಡಳ ಬಾಚರಸರು ತಮ್ಮ ನಿರ್ಮಲ ಭಕ್ತಿ,ಶ್ರದ್ಧೆ ಹಾಗೂ ಕಾಯಕ ನಿಷ್ಠೆಗಳಿಗೆ ಹೆಸರಾದವರು. 12ನೇ ಶತಮಾನದಲ್ಲಿ ಬಿಜ್ಜಳ ಮಹಾರಾಜನ ಆಸ್ಥಾನದಲ್ಲಿ ದವಸ ಧಾನ್ಯಗಳ ಉಗ್ರಾಣದ ಮೇಲ್ವಿಚಾರಣೆಯ ಕಾಯಕ ಮಾಡುತ್ತಿದ್ದ ಸೊಡ್ಡಳ ಬಾಚರಸರು ಅಪ್ರತಿಮ ಕಾಯಕ ನಿಷ್ಠರು.

ಪ್ರತಿವರ್ಷ ದೂರದ ಸೌರಾಷ್ಟ್ರ ದೇಶಕ್ಕೆ ಹೋಗಿ ಅಲ್ಲಿಯೇ ಶಿವರಾತ್ರಿಯ ದಿನ ಸೋಮೇಶ್ವರನ ಪೂಜೆ ಜಪ-ತಪಗಳಲ್ಲಿ ಪಾಲ್ಗೊಂಡು ಅಹೋರಾತ್ರಿ ಭಜನೆ ಮಾಡಿ ಪುನೀತ ಭಾವವನ್ನು ಹೊತ್ತು ಮರಳಿ ಕಲ್ಯಾಣಕ್ಕೆ ಬರುತ್ತಿದ್ದರು. ಇದು ಹಲವಾರು ವರ್ಷಗಳ ಕಾಲದಿಂದ ನಡೆದು ಬಂದಿತ್ತು. ಮುಂದೆ ಬಸವಣ್ಣನವರು ಕಲ್ಯಾಣಕ್ಕೆ ಕಾಲಿರಿಸಿ ಭಂಡಾರದ ಮೇಲ್ವಿಚಾರಣೆಯನ್ನು ಮಾಡಿ ನಂತರ ಮಹಾಮಂತ್ರಿಗಳಾಗಿ ಲಿಂಗ ಪೂಜೆ, ದಾಸೋಹ, ಕಾಯಕ ಹಾಗೂ ಶರಣ ಧರ್ಮದ ಸ್ಥಾಪನೆಯ ಕಾರ್ಯವನ್ನು ಕೈಗೊಂಡು ಶರಣರನ್ನು ಸಂಘಟಿಸಿ ಅನುಭವ ಮಂಟಪವನ್ನು ಕಟ್ಟಿ ಅನುಭಾವದ ಗೋಷ್ಠಿಗಳನ್ನು ಮಾಡಲು ಆರಂಭಿಸಿದಾಗ ಅವರಿಗೆ ಜೊತೆಯಾದವರು ಸೊಡ್ಡಳ ಬಾಚರಸರು.


ಪ್ರತಿದಿನ ಮುಂಜಾನೆಯಿಂದ ಸಂಜೆಯವರೆಗೂ ಉಗ್ರಾಣದ ಕೋಣೆಗೆ ಬರುವ ದವಸ ಧಾನ್ಯಗಳನ್ನು ಬೇರೆ ಬೇರೆಯಾಗಿ ವಿಂಗಡಿಸಿ ಚೀಲಗಳಲ್ಲಿ ತುಂಬಿಸಿ ಕಟ್ಟಿಡುವ ಕೆಲಸವನ್ನು ಅವರು ಮಾಡುತ್ತಿದ್ದರು.

**ಉಪೇಕ್ಷಿತ ವಚನಕಾರರು**

ಒಂದು ಬಾರಿ ಇನ್ನೇನು ಶಿವರಾತ್ರಿಗೆ ಕೆಲವೇ ದಿನಗಳಿವೆ ಎನ್ನುವಾಗ ಸೊಡ್ಡಳ ಬಾಚರಸರು ತಮ್ಮ ಕಾರ್ಯ ಚಟುವಟಿಕೆಗಳಿಗೆ ಕೆಲ ದಿನಗಳ ಕಾಲದ ರಜೆಯನ್ನು ನೀಡಲು ಬಿಜ್ಜಳ ಮಹಾರಾಜರನ್ನು ಕೋರಿಕೊಂಡರು. ಆ ಸಮಯದಲ್ಲಿ ಸಾಕಷ್ಟು ದವಸ ಧಾನ್ಯಗಳ ದಾಸ್ತಾನು ಹೊಂದಿಸುವ ಕೆಲಸ ಬಾಕಿ ಇತ್ತು. ಶರಣರನ್ನು ಕಂಡರೆ ಆಗದೆ ಇರುವ ಮಹಾಮಂತ್ರಿಗಳಾದ ಕೊಂಡೆಯ ಮಂಚಣ್ಣ ಮತ್ತು ಇತರ ಮಂತ್ರಿಗಳು ಬಿಜ್ಜಳ ಮಹಾರಾಜರಿಗೆ ಕಿವಿಯೂದಿ ಬಾಚರಸರಿಗೆ ರಜೆ ನೀಡದೆ ಇರಲು ಹೇಳಿದರು.

ಬಿಜ್ಜಳ ಮಹಾರಾಜರು ಅಂತೆಯೇ ರಜೆಯನ್ನು ಕೊಡಲು ಒಪ್ಪಲಿಲ್ಲ. ಆ ಸಮಯದಲ್ಲಿ ಕೊಂಡೆಯ ಮಂಜಣ್ಣನವರು ಬಾಚರಸರೇ ನೀವು ಮಹಾ ದೈವಭಕ್ತರು. ಪ್ರತಿ ವರ್ಷ ನೀವೇ ಸೌರಾಷ್ಟ್ರಕ್ಕೆ ಹೋಗಬೇಕೇ?.. ಸೌರಾಷ್ಟ್ರದ ಸೋಮನಾಥನನ್ನು ನಮ್ಮ ಅರಮನೆಯ ಉಗ್ರಾಣದ ಕೋಣೆಗೆ ಬಂದು ಕುಳಿತುಕೊಳ್ಳಲು ಕೇಳಬಾರದು. ಆಗ ನಿಮ್ಮ ಪೂಜೆ ಜಪ-ತಪಗಳು ಸಾಂಗವಾಗಿ ನೆರವೇರುತ್ತದೆ ಎಂದು ಕುಚೋದ್ಯ ಮಾಡಿದರು.

ಅವರ ಕುಚೋದ್ಯದಿಂದ ತುಸು ಬೇಸರಗೊಂಡ ಬಾಚರಿಸಲು ಮರಳಿ ಉಗ್ರಾಣದ ಕೋಣೆಗೆ ಹೋದರು ತಮ್ಮ ಸಂಗಡಿಗರೊಂದಿಗೆ ನಿಧಾನವಾಗಿ ಎಲ್ಲಾ ಚೀಲಗಳನ್ನು ಬೇರೆ ಬೇರೆ ಜಾಗದಲ್ಲಿ ಒಟ್ಟಿದರು. ಇಡೀ ಉಗ್ರಾಣವನ್ನು ಸ್ವಚ್ಛಗೊಳಿಸಿ ಮುಖ್ಯವಾದ ಭಾಗವನ್ನು ಸುಣ್ಣಬಣ್ಣ ಸಾರಣೆಗಳಿಂದ ಅಲಂಕರಿಸಿದರು.ನಂತರ ಅದರ ಅಗ್ರಭಾಗದತ್ತ ಭಕ್ತಿಯಿಂದ ಕೈಮುಗಿದು ದೇವಾ... ಈ ಬಾರಿ ನಿನ್ನ ದರ್ಶನ ಮಾಡುವ ಭಾಗ್ಯ ನನಗಿಲ್ಲದೆ ಹೋಯಿತು. ಎಲ್ಲೆಲ್ಲೂ ಇರುವ ನೀನು ನಮ್ಮ ಉಗ್ರಾಣದ ಕೋಣೆಯಲ್ಲಿ ಬಂದು ನೆಲೆಸುವಂಥಾದರೆ ನಾನು ಕೃತಾರ್ಥನಾಗುವೆ ಎಂದು ಮನಸ್ಸಿನಲ್ಲಿಯೇ ಹಲುಬಿ ಹಂಬಲಿಸಿದರು.



ಮರುದಿನ ಮುಂಜಾನೆ ಶಿವರಾತ್ರಿಯ ಶುಭದಿನ. ಉಗ್ರಾಣದ ಕೋಣೆಯನ್ನು ಸ್ವಚ್ಛಗೊಳಿಸಿ ಅಲಂಕರಿಸಿ ಬಾಗಿಲು ಹಾಕಿಕೊಂಡು ಹೋಗಿದ್ದ ಬಾಚರಸ ಮತ್ತು ಸಂಗಡಿಗರು ಮರುದಿನ ಮುಂಜಾನೆ ಎಂದಿನಂತೆ ಅದರ ಕೀಲಿಯನ್ನು ತೆಗೆದು ಒಳಗೆ ಬಂದು ನೋಡಲು ಅಚ್ಚರಿಯೊಂದು ಕಾದಿತ್ತು. ಸೌರಾಷ್ಟ್ರ ಸೋಮೇಶ್ವರನು ಲಿಂಗರೂಪಿಯಾಗಿ ಅಲ್ಲಿ ಉದ್ಭವಿಸಿದ್ದನು.ಬಾಚರಸರು ಭಕ್ತಿಯ ಶಕ್ತಿಯನ್ನು ನೋಡಿ ಉದ್ವೇಗದಿಂದ ಲಿಂಗವನ್ನು ಒಪ್ಪಿ ಸಂತಸಪಟ್ಟರೆ ಅವರ ಸಂಗಡಿಗರು ಅಚ್ಚರಿಗೊಂಡರು. ವಿಷಯ ಎಲ್ಲೆಡೆ ಹರಡಿತು. ಬಿಜ್ಜಳ ಮಹಾರಾಜರಾದಿಯಾಗಿ ಎಲ್ಲರೂ ಅರಮನೆಯ ಉಗ್ರಾಣಕ್ಕೆ ಬಂದರು. ಬಿಜ್ಜಳ ಮಹಾರಾಜರು ಅತ್ಯಂತ ಸಂತಸದಿಂದ ಲಿಂಗವನ್ನು ಅಭಿಷೇಕ ಮಾಡಿ ಶಿವರಾತ್ರಿ ಹಬ್ಬದ ಆಚರಣೆ ಮಾಡಲು ಕರೆಯಿತ್ತರು.

ಮುಂದೆ ಶಾಸ್ತ್ರೋಕ್ತವಾಗಿ ಲಿಂಗವನ್ನು ಪೂಜಿಸುವ ಮೂಲಕ ಶಿವರಾತ್ರಿ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಎಲ್ಲರೂ ಬಾಚರಸರ ಭಕ್ತಿಯ ಶಕ್ತಿಯನ್ನು ಹೊಗಳಿದರು.

108 ವಚನಗಳನ್ನು ರಚಿಸಿರುವ ಬಾಚರಸರ ವಚನಗಳ ಅಂಕಿತನಾಮ 'ದೇವರಾಯ ಸೊಡ್ಡಳ ' ಎಂದಾಗಿದೆ. ಸಾಮಾಜಿಕ ಕಳಕಳಿ ಹಾಗೂ ಕಾಯಕ ತತ್ವಗಳು ಇವರ ವಚನಗಳ ಪ್ರಮುಖ ಲಕ್ಷಣಗಳಾಗಿದ್ದು 'ಕಾಯಕವೇ ಕೈಲಾಸ' ಎಂಬ ತತ್ವಕ್ಕೆ ಅವರು ತಮ್ಮ ಬದುಕನ್ನು ಮುಡುಪಾಗಿಟ್ಟಿದ್ದರು. ಐಹಿಕ ಸುಖ-ಭೋಗಗಳಿಗೆ ಮರುಳಾಗದೆ ಪ್ರಾಮಾಣಿಕತೆಯನ್ನು ಎತ್ತಿಹಿಡಿದರು.


ಬಾಹ್ಯ ಆಡಂಬರಗಳಿಗಿಂತ ಆಂತರಿಕ ಶುದ್ಧಿಯೇ ಮುಖ್ಯ ಎಂದು ಸಾರಿದರು.

ವರ್ಗ, ವರ್ಣ, ಜಾತಿ-ಭೇದಗಳನ್ನು ವಿರೋಧಿಸಿ ಮೇಲು-ಕೀಳುಗಳನ್ನು ದೂರವಿರಿಸಿ ಮೂಢನಂಬಿಕೆ ಮತ್ತು ಕಪಟ ಭಕ್ತಿಯನ್ನು ಬಾಚರಸರ ವಚನಗಳು ತೀವ್ರವಾಗಿ ಖಂಡಿಸುತ್ತವೆ. ಸಮ ಸಮಾಜದ ಪರಿಕಲ್ಪನೆ ಅವರದಾಗಿತ್ತು.

ಭೂಮಿಯಲ್ಲಿ ಹುಟ್ಟಿದ ಪ್ರತಿಯೊಬ್ಬರು ಹೊನ್ನು, ಹೆಣ್ಣು,ಮಣ್ಣುಗಳ ವ್ಯಾಮೋಹವನ್ನು ತ್ಯಜಿಸಿ ಲಿಂಗದಲ್ಲಿ ಐಕ್ಯತೆಯ ಸಾಧನೆಯಲ್ಲಿ ತೊಡಗಬೇಕೆಂಬುದು ಅವರ ವಚನಗಳ ಮುಖ್ಯ ತಿರುಳಾಗಿತ್ತು.

ಭಕ್ತನಾದೆಡೆ ತನು ಮನದಾಸೆಯಳಿದುಳಿದಿರಬೇಕು ಎಂದು ತಮ್ಮ ವಚನದಲ್ಲಿ ಹೇಳಿರುವ ಬಾಚರಸರು ಬತ್ತನಾದವನು ತನ್ನ ದೇಹ ಮನಸ್ಸು ಮತ್ತು ಆಸೆಗಳನ್ನು ತೊರೆದವನಾಗಿರಬೇಕು.

' ಲಿಂಗದೇವನೇ ಕರ್ತ ಶಿವಭಕ್ತನೇ ಶ್ರೇಷ್ಠ
ಕೊಲ್ಲದಿಪ್ಪುದೆ ಧರ್ಮ
ಅಧರ್ಮದಿಂದ ಬಂದುದನೊಲ್ಲದಿರ್ಪುದೇ ನೇಮ
ಇದೇ ಸತ್ಪಥ ಉಳಿದುದೆಲ್ಲ ಮಿಥ್ಯವೆಂದೇ ಕಾಣಾ
ದೇವರಾಯ ಸೊಡ್ಡಳ '




ಶಿವನೇ ಸರ್ವೋಚ್ಚ ದೈವ, ಶಿವಭಕ್ತನೇ ಶ್ರೇಷ್ಠ. ಇತರರಿಗೆ ಹಿಂಸೆಯನ್ನು ಮಾಡದಿರುವುದೇ ಧರ್ಮ, ಅನ್ಯಾಯದ ದಾರಿಯಿಂದ ಬಂದ ಸಂಪತ್ತನ್ನು ಒಪ್ಪದಿರುವುದು ನಿಯಮ ಅದುವೇ ಬದುಕಿನ ಸರಿಯಾದ ದಾರಿ, ಉಳಿದುದೆಲ್ಲವೂ ಸುಳ್ಳು ಎಂದು ಅವರು ತಮ್ಮ ವಚನದ ಮೂಲಕ ಸ್ಪಷ್ಟಪಡಿಸುತ್ತಾರೆ

ಬ್ರಾಹ್ಮಣನು ಅಧಿಕವೆಂದೆಂಬಿರಿ ಭೋ ಆ ಮಾತದು ಮಿಥ್ಯ..... ಎಂದು ಹೇಳುವ ಮೂಲಕ ಹುಟ್ಟಿನಿಂದ ಯಾರೂ ಶ್ರೇಷ್ಠರಾಗುವುದಿಲ್ಲ ತಮ್ಮ ನಡವಳಿಕೆಯಿಂದ ಭಕ್ತಿಯ ಮಾರ್ಗದಿಂದ ನಡೆಯುವವರು ಎಲ್ಲರಿಗಿಂತಲೂ ಮಿಗಿಲು ಎಂಬುದನ್ನು ಅವರು ಜಾತಿ ಪದ್ಧತಿಯ ಕುರಿತಾಗಿ ಹೇಳಿದರು. ಸಮಾಜದಲ್ಲಿ ಇರುವ ಎಲ್ಲ ಬಗೆಯ ಮೇಲು-ಕೀಳು, ಕುಲೋತ್ತಮ-ಕುಲ ಹೀನ, ಬಡವ ಬಲ್ಲಿದ ಭಾವಗಳನ್ನು ತೀವ್ರವಾಗಿ ಖಂಡಿಸಿದ ಸೊಡ್ಡಳ ಬಾಚರಸರು ಸರ್ವಕಾಲಕ್ಕೂ ಮಾನ್ಯರು.

**ಅಂತಹ ಮಹಾಮಹಿಮ ಶರಣ ಸೊಡ್ಡಳ ಬಾಚರಸರಿಗೆ ನಮೋ ನಮಃ**

# ಹೊಸಿಲಿನಿಂದಾಚೆ ಹೊಸದೇನಿಲ್ಲ.... ಮತ್ತದೆ ಒಂಟಿತನ....!



| ಪುಷ್ಪ ಪ್ರಸಾದ್

ಹೊಸಿಲಿನಿಂದಾಚೆ ಹೆಪ್ಪುಗಟ್ಟಿದ ಭಾನು, ಗೂಡು ಸೇರಿದ ಹಕ್ಕಿ, ಅಲ್ಲೊಂದು ಇಲ್ಲೊಂದು ಬೀಳುವ ಹನಿಗಳ ಕಂಡು ಮುಚ್ಚಿ ಹೋದ ಅಂಗಡಿ ಬಾಗಿಲುಗಳು, ವಾಹನಗಳಿಲ್ಲದ ರಸ್ತೆ, ಜನರಿಲ್ಲದ ಬಿಡಾರ, ಇದೆಲ್ಲದರ ಜೊತೆಗೆ ನೂರಾರು ನೆನಪುಗಳ ರಾಶಿ ಹಾಕಿಕೊಂಡು ಕೂತಿದ್ದರೂ ಮನದೊಳಗೆ ಆವರಿಸಿದ ಮೌನ, ನೂರಾರು ಮಾತಿದ್ದರೂ ಮೌನದೊಂದಿಗೆ ಹೊಂದಿಕೊಂಡ ಒಂಟಿತನದ ಬದುಕು. ಒಂಟಿತನ ಎನ್ನುವುದು ಕೇವಲ ಯಾರೂ ಇಲ್ಲದೆ ಒಂಟಿಯಾಗಿರುವುದಲ್ಲ, ಬದಲಿಗೆ ಜನರು ಸುತ್ತುವರೆದಿದ್ದರೂ ಅಥವಾ ಎಲ್ಲವೂ ಇದ್ದರೂ ಏನೋ ಕಳೆದುಕೊಂಡಂತೆ ಭಾಸವಾಗುವ ಭಾವನಾತ್ಮಕ ಸ್ಥಿತಿ. ಬದುಕು ಒಂಟಿತನ ಎನಿಸುವುದು ಒಂದು ಇಷ್ಟವಾದ ಬಾಂಧವ್ಯವೊಂದು ನಿರಾಶೆ ಉಂಟು ಮಾಡಿದಾಗ, ಜೋರಾಗಿ ಬೀಸಿದ ಗಾಳಿಗೆ ಎಲೆಗಳು ಉದುರಿದಂತೆ ಕನಸುಗಳು ಕಂಬನಿಯಲ್ಲಿ ಜಾರಿಹೋದಾಗ, ಅದನ್ನು ಹೇಳಿಕೊಳ್ಳಲು ಪದಗಳು ಇಲ್ಲದಿದ್ದಾಗ. ಅನುಭವಿಸಲು ಅಸಾಧ್ಯವೆನ್ನುವ ನೋವೊಂದು ಕಾಡುವಾಗ, ಮನದೊಳಗಿನ ದುಗುಡ ಹೆಚ್ಚಾದಾಗ ಕಾರಣಗಳು ಅರಸಿ ಬಂದಾಗ ಅಲ್ಲಿ ಸಿಗುವುದು ಬರೀ ಒಂಟಿತನ. ನಂಬಿಕೆ, ವಿಶ್ವಾಸಗಳು ಮೂಟೆಕಟ್ಟಿ ನಿಂತಾಗ, ಹುಟ್ಟಿದ



ನಿರೀಕ್ಷೆಗಳು ಹುಸಿಯಾದಾಗ, ಭರವಸೆಗಳು ಮುಖ ತಿರುಗಿಸಿ ನಿಂತಾಗ, ಬದುಕು ಇಷ್ಟೇನಾ ಎಂಬ ಉದಾಸೀನತೆಯೊಂದು ಆವರಿಸಿ ಹೃದಯಕ್ಕೆ ನೋವಾಗಿ ರಾತ್ರಿಯಿಡೀ ತೋಯ್ದ ಕಣ್ಣ ಹನಿಗಳಿಂದ ತಲೆದಿಂಬು ಒದ್ದೆಯಾಗಿ ಮುಂಜಾನೆಯ ಹೊತ್ತಿಗೆ ಒಂಟಿತನವನ್ನೆ ತುಂಬಿಕೊಂಡಿರುತ್ತದೆ, ಕೆಲವು ನೆನಪುಗಳು ನಮ್ಮ ಅಂತರಾಳದೊಳಹೊಕ್ಕಿ ಚಿಂದಿಮಾಡಿದರೂ ಭಾವನೆಗಳ ಪ್ರಪಂಚದಲ್ಲಿ ಯಾಂತ್ರಿಕತೆಯಲ್ಲಿ ಸಾಗುವಾಗ ಎಲ್ಲೊ ಅಂಟಿಕೊಂಡ ಬಂಧವೊಂದು ನಮ್ಮೊಳಗಿರುವ ಎಲ್ಲವನ್ನು ಖರೀದಿ ಮಾಡಿ ಕಾಣದ ಯಾವುದೋ ಅಮೂರ್ತ ಭಾವಗಳ ಲೋಕದೊಳಗೆ ಎಲ್ಲವನ್ನು ಬಿಕರಿ ಮಾಡಿ ಒಂಟಿತನವೊಂದನ್ನೇ ಉಳಿಸಿ ಹೋಗಿರುತ್ತದೆ. ನಡೆಯುತ್ತಲೇ ಸವೆಸಿದ ಬದುಕಿನ ಹಾದಿಯ ನಡುವೆ ಒಂದಷ್ಟು ನೆನಪುಗಳನ್ನು ದೋಚಿಕೊಂಡು, ಚಿಗುರಿದ ಎಳೆ ಕನಸುಗಳನ್ನು ಪೋಷಿಸುತ್ತ, ಹೇಳಲಾಗದ ಭಾವನೆಗಳೊಡನೆ ನಾಳೆ ಬರುತ್ತದೆ ಎಂಬ ಭರವಸೆಯಲ್ಲೇ ಬದುಕಿನ ಮಜಲುಗಳನ್ನು ಸವೆಸಿಬಿಡುವ ನಮ್ಮ ಬಾಳು ಈ ನಿರಾಕಾರಿ ಜಗತ್ತಿನೊಳಗೆ ಬಂಧಿಯಾಗಿಬಿಡುತ್ತದೆ. ಮನದೊಳಗೆ ಬಳ್ಳಿಯಂತೆ ಹಬ್ಬಿಕೊಂಡ ನೋವು, ಹತಾಶೆ, ಬೇಸರ ಎಲ್ಲವನ್ನು ಆಗಾಗ ಕಿತ್ತು ಶುಚಿಗೊಳಿಸಿ ಒಂಟಿತನದ ಮೌನದೊಳಗೆ ದೂಡಿ ಬಿಡಬೇಕು. ಆಗಲೇ ನಾಳೆ ಎಂಬ ನಂಬಿಕೆಯ ಮೇಲೆ ಭರವಸೆ ಹುಟ್ಟುವುದು. ಸುರಿದು ಹೋದ ಕಂಬನಿಯ ಜೊತೆ ಜಾರಿ ಹೋದ ಕನಸುಗಳು ಮರುಹುಟ್ಟು ಪಡೆಯುವುದು. ಇಷ್ಟೆಲ್ಲ ಬೇಸರದೊಂದಿಗೆ ಭರವಸೆಯ ಹೊತ್ತುಕೊಂಡ ಮನಸು ಸಾರಿ ಸಾರಿ ಹೇಳುವುದು ಹೊಸಿಲಿನಿಂದಾಚೆ ಹೊಸದೇನಿಲ್ಲ, ಮತ್ತದೆ ಒಂಟಿತನ, ಕದಡಿದ ನೆನಪುಗಳ ನಡುವೆಯೂ ಕಾಡುವ ಅದೇ ಒಂಟಿತನ.



# ಬೈಕ್ ಆಂಬುಲೆನ್ಸ್ ದಾದಾ





| ಡಾ.ಸುಧಾಕರ.ಜಿ.ಲಕ್ಕವಳ್ಳಿ

**ಸ್ಫೂರ್ತಿ ಸುಧೆ - 28**

ಒಂದು ಬೈಕ್, ಒಂದು ಪ್ರತಿಜ್ಞೆ, 7000 ಜೀವಗಳು! ಪಶ್ಚಿಮ ಬಂಗಾಲದ ಜಲ್ಪೈಗುರಿ ಜಿಲ್ಲೆಯ ಧಲಬಾರಿ ಗ್ರಾಮದ ಕರೀಮುಲ್ ಹಕ್ ಅವರ ಕಥೆ ಇದೇ. 1995ರಲ್ಲಿ ಆಂಬುಲೆನ್ಸ್ ಸಿಗದೇ ತಾಯಿ ಹೃದಯಾಘಾತದಿಂದ ಮೃತರಾದರು. ಆ ನೋವನ್ನೇ ಶಕ್ತಿಯಾಗಿಸಿದ ಹಕ್, ಇನ್ನೊಬ್ಬರು ಚಿಕಿತ್ಸೆ ಸಿಗದೆ ಸಾಯಬಾರದು ಎಂದು ಶಪಥ ಮಾಡಿದರು. ಕೈಯಲ್ಲಿದ್ದ ಹಳೆಯ ಮೋಟಾರ್ ಬೈಕನ್ನೇ ಉಚಿತ ಆಂಬುಲೆನ್ಸ್ ಮಾಡಿದರು.

ಕಳೆದ 25 ವರ್ಷಗಳಿಂದ ದುರ್ಗಮ ಅರಣ್ಯ, ಹಳ್ಳಿ ದಾರಿಗಳಲ್ಲಿ ರೋಗಿಗಳನ್ನು ಆಸ್ಪತ್ರೆಗೆ ತಲುಪಿಸುತ್ತಿದ್ದಾರೆ. ಇವರ ಸೇವೆ ಕಂಡು ಬಜಾಜ್ ಸಂಸ್ಥೆ ಹಾಸಿಗೆ ಸಹಿತ ಸೈಡ್ ಟ್ರಾಲಿ ಬೈಕ್ ಉಡುಗೊರೆಯಾಗಿ ನೀಡಿತು. ಇದುವರೆಗೆ 7000ಕ್ಕೂ ಹೆಚ್ಚು ಜನರ ಪ್ರಾಣ ಉಳಿಸಿದ್ದಾರೆ.

ದೇಣಿಗೆಯಿಂದ ಬಡವರಿಗಾಗಿ ಸಣ್ಣ ಆಸ್ಪತ್ರೆ, ಉಚಿತ ಟೇಕ್ವಾಂಡೋ ತರಬೇತಿ ಶಾಲೆ, ಹೊಲಿಗೆ ಕೇಂದ್ರ ನಡೆಸುತ್ತಿದ್ದಾರೆ. ಕೋವಿಡ್ ಸಮಯದಲ್ಲಿ ನೂರಾರು ಕುಟುಂಬಗಳಿಗೆ ಆಹಾರ ವಿತರಿಸಿದರು.

ಈ ಮಾನವೀಯ ಸೇವೆಗೆ ಭಾರತ ಸರ್ಕಾರ 2017ರಲ್ಲಿ ಪದ್ಮಶ್ರೀ ನೀಡಿ ಗೌರವಿಸಿದೆ. ಟೆಡ್ ಎಕ್ಸ್ ಹಾಗೂ ಕೆಬಿಸಿ ವೇದಿಕೆಗಳಲ್ಲೂ ಇವರಿಗೆ ರಾಷ್ಟ್ರಮನ್ನಣೆ ಸಿಕ್ಕಿದೆ.ಯುವಕರೇ, ಕರೀಮುಲ್ ಹಕ್ ಹೇಳುತ್ತಾರೆ ಜೀವ ಉಳಿಸುವುದಕ್ಕಿಂತ ದೊಡ್ಡ ಸಾಧನೆ ಇಲ್ಲ. ದೊಡ್ಡ ಹುದ್ದೆ, ಹಣ ಬೇಡ. ಸೇವೆ ಮಾಡಲು ದೊಡ್ಡ ಮನಸ್ಸು ಸಾಕು. ನಿಮ್ಮ ಬೈಕ್ ಕೂಡ ಯಾರಿಗಾದರೂ ಆಂಬುಲೆನ್ಸ್ ಆಗಬಲ್ಲದು!


# ವಿಶ್ವ ಯೋಗ ದಿನ ಯಶಸ್ಸಿಗೆ ಸಂಕಲ್ಪ



**ಮೈಸೂರು:** ಪ್ರಸಕ್ತ ಸಾಲಿನ ವಿಶ್ವ ಯೋಗ ದಿನದಂದು ಬರೋಬ್ಬರಿ 1.20 ಲಕ್ಷ ಜನರನ್ನು ಸೇರಿಸಿ ಸಾಮೂಹಿಕವಾಗಿ ಯೋಗಾಭ್ಯಾಸ ಮಾಡುವ ಮೂಲಕ ಕಾರ್ಯಕ್ರಮ ಯಶಸ್ವಿಯಾಗಿಸಲು ಸಂಕಲ್ಪ ಮಾಡಲಾಯಿತು..

ಯೋಗ ಫೆಡರೇಷನ್ ಆಫ್ ಮೈಸೂರು ವತಿಯಿಂದ ನಗರದ ಸರಸ್ವತಿಪುರಂನಲ್ಲಿರುವ ವಿಜಯ ವಿಠಲ ಶಾಲೆ ಆವರಣದಲ್ಲಿ ಆಯೋಜಿಸಿದ್ದ ಸಂಕಲ್ಪ ದಿನ-2026' ಕಾರ್ಯಕ್ರಮದಲ್ಲಿ ನೂರಾರು ಯೋಗಪಟುಗಳು ಹಾಗೂ ಯೋಗ ಶಿಕ್ಷಕರು ಪ್ರಮಾಣ ವಚನ ಸ್ವೀಕರಿಸಿದರು.

ಮೈಸೂರು ಜಾಗತಿಕ ಯೋಗ ನಗರಿ?: ಕಾರ್ಯಕ್ರಮದಲ್ಲಿ ಮಾತನಾಡಿದ ಪ್ರತಿನಿಧಿ ದಿನಪತ್ರಿಕೆ ಪ್ರಧಾನ ಸಂಪಾದಕ ಸಿ.ಕೆ.ಮಹೇಂದ್ರ, ಮೈಸೂರು ಜಾಗತಿಕ ಮಟ್ಟದಲ್ಲಿ ಯೋಗ ನಗರವಾಗಿ ಪ್ರಸಿದ್ಧಿ ಗಳಿಸಿದೆ. ವಿಶ್ವ ಯೋಗ ದಿನ ಪರಿಕಲ್ಪನೆ ಘೋಷಣೆಯಾದ ವರ್ಷದಿಂದಲೂ ದೊಡ್ಡ ಮಟ್ಟದಲ್ಲಿ ಯೋಗ ಕಾರ್ಯಕ್ರಮಗಳನ್ನು ಸಂಘಟಿಸಿ ದಾಖಲೆ ನಿರ್ಮಿಸಿದೆ" ಎಂದು ಸ್ಮರಿಸಿದರು. ಮೈಸೂರಿನಲ್ಲಿ ಈಗ ಬೆಳಗಿನ ಜಾವದಲ್ಲಿ ಯೋಗಪಟುಗಳು ಕಾಣಸಿಗುತ್ತಾರೆ. ಮನೆ, ಉದ್ಯಾನ, ಸಂಘ-ಸಂಸ್ಥೆಗಳಲ್ಲಿ ಯೋಗಾಭ್ಯಾಸಕ್ಕೆ ಬರುವ ಅಥವಾ ಹೋಗುವ ಜನ ರಸ್ತೆಗಳಲ್ಲಿ ಕಾಣಿಸುತ್ತಾರೆ. ಅಂದರೆ, ಜನರಿಗೆ ಆರೋಗ್ಯ ಮತ್ತು ಯೋಗದ ಮಹತ್ವ ಅರಿವಾಗಿದೆ. ಇದನ್ನು ನಾವು ಇನ್ನಷ್ಟು ವಿಸ್ತರಿಸೋಣ. ಮುಂಬರುವ ಯೋಗ ದಿನವನ್ನು ಯಶಸ್ವಿಗೊಳಿಸೋಣ. ಇದಕ್ಕೆ ಎಲ್ಲ ಯೋಗಪಟುಗಳು, ಯೋಗ ಶಿಕ್ಷಕರು, ಸಂಘ-ಸಂಸ್ಥೆಗಳು, ಶಾಲಾ-ಕಾಲೇಜುಗಳು, ನಾಗರಿಕರು ಕೈಜೋಡಿಸಬೇಕು? ಎಂದು ಮನವಿ ಮಾಡಿದರು.



**ಸಾಮೂಹಿಕ ಯೋಗಾಭ್ಯಾಸ:** ಮೈಸೂರು ಯೋಗ ಒಕ್ಕೂಟ, ಜಿಎಸ್‌ಎಸ್ ಯೋಗ, ಭಾರತ್ ಸ್ವಾಭಿಮಾನ್ ಟ್ರಸ್ಟ್, ಮೈಸೂರು ಯೋಗ ಅಸೋಸಿಯೇಷನ್, ಯೋಗ ಸ್ಪೋರ್ಟ್ಸ್ ಫೌಂಡೇಶನ್, ಎಸ್‌ಪಿವೈಎಸ್‌ಎಸ್ ಮುಂತಾದ ಸಂಘಟನೆಗಳ ಸದಸ್ಯರು ಯೋಗ ಶಿಷ್ಟಾಚಾರದ ಅನ್ವಯ ಯೋಗಾಭ್ಯಾಸ ಮಾಡಿದರು.

ಜಿಎಸ್‌ಎಸ್ ಯೋಗ ಸಂಸ್ಥೆಯ ಸಂಸ್ಥಾಪಕ ಶ್ರೀಹರಿ ದ್ವಾರಕನಾಥ್, ರಂಗನಾಥ್, ಸರಳ, ವಿವಿಧ ಸಂಘಟನೆಗಳ ಶಶಿಕುಮಾರ್, ದೇವರಾಜು, ಜಲೇಂದ್ರ, ಬಿ.ಪಿ.ಮೂರ್ತಿ, ಶ್ರೀನಿವಾಸ ನಾಯ್ಡು, ಕಿರಣ್ ಮುಂತಾದವರು ಪಾಲ್ಗೊಂಡಿದ್ದರು.

# ಆಧುನಿಕ ರಕ್ತ ಪಿಪಾಸುಗಳು

ಮೊನ್ನೆ ಸಂಜೆಯ ಸಮಯ ಕೆಲಸ ಮುಗಿಸಿ ಮನೆಗೆ ಬಂದೆ ಫೇಸ್ಬುಕ್ ನಲ್ಲಿ ಫ್ರೆಂಡ್ ರಿಕ್ವೆಸ್ಟ್ ಒಂದು ಬಂದಿತ್ತು!

ನೋಡಲು ಸ್ವಲ್ಪ ಗಮನ ಸೆಳೆವ ಸುಂದರ ಮಹಿಳೆ ಮೊದಲಿಗೆ ಎಲ್ಲೂ ನೋಡಿರದ ಮುಖ ಬೇಡ ಅನ್ನಿಸಿತು, ಆದರೆ ನನ್ನ ಸ್ನೇಹಿತರ ಮ್ಯೂಚುಯಲ್ ಫ್ರೆಂಡ್ ಲಿಸ್ಟ್ ನಲ್ಲಿ ಇದ್ದದ್ದನ್ನು ನೋಡಿ ಒಪ್ಪಿಗೆ ಕೊಟ್ಟು ಸುಮ್ಮನಾದೆ,

ಆದರೆ ಅಂದೇ ರಾತ್ರಿ 8.44 ಸಮಯಕ್ಕೆ ಮೆಸೆಂಜರ್ ನಲ್ಲಿ ಆ ಮಹಿಳೆಯ ಮೆಸೇಜ್ ಬಂತು, ನಾರ್ಮಲ್ ಆಗಿ ವಿಚಾರಣೆ ನಡೆಯಿತು ನಂತರ ಹೊಸ ಬಗೆಯ ಆಮಂತ್ರಣವೂ ಬಂದಿತು, ನಾನು ಇದನ್ನ ಯೋಚನೆಯು ಸಹ ಮಾಡಿರಲಿಲ್ಲ ನಾನು ಯಾಕೆ ರಿಸ್ಕ್ ಅನ್ಕೊಂಡು ಕೆಲವು ನಿಮಿಷ ಸುಮ್ಮನಾದೆ, ನಂತರ ವಾಟ್ಸಾಪ್ ನಂಬರ್ ಕೇಳಿದರು ಕೊಡಲಿಲ್ಲ ತದನಂತರ ಮೆಸ್ಸೆಂಜರ್ ನಲ್ಲಿ ಬಗೆ ಬಗೆ ಫೋಟೋ ಬಂತು ಅದು ಅರೇ ಬರೆ ಬಟ್ಟೆ ತೊಟ್ಟಿರುವವು,

ಸರ್ ನನಗೆ ಹಣದ ಅವಶ್ಯಕತೆ ಇದೆ ಕೇವಲ 500/- ರೂ ಫೋನ್ಪೆ ಮಾಡಿ ನಿಮಗೆ ನನ್ನೆಲ್ಲಾ ದೇಹದ ಸೌಂದರ್ಯ ನೋಡುವ ಚಾನ್ಸ್ ಅಂತ, ಕೂಡಲೇ

ಫೋನ್ ಪೆ ಕ್ಯೂಆರ್ ಕೋಡ್ ನ ಫೋಟೋ ಸಹ ಬಂತು,

ಇದನ್ನೆಲ್ಲಾ ನೋಡಿ ಮೋಸ ಎಂದು ಸುಮ್ಮನಾದೆ, ನಂತರ ಪದೇ ಪದೇ ವಿಡಿಯೋ ಕಾಲ್ ಬರ್ತಾನೆ ಇತ್ತು ಕೊನೆಗೆ ಕಾಲ್ ರಿಸೀವ್ ಮಾಡಿ ನನಗೆ ಇಂಟ್ರೆಸ್ಟ್ ಇಲ್ಲ ಅಂದು ಬಿಡೋಣ ಎಂದು ರಿಸೀವ್ ಮಾಡಿ ನೋಡಿದರೆ ಅರೆ ಬೆತ್ತಲೆ ಹೆಣ್ಣು! ಕಣ್ಣ ಮುಂದೆ ನನಗೆ ಮುಜುಗರವಾಗಿ ಡಿಸ್ಕನೆಕ್ಟ್ ಮಾಡಿದೆ, ನಂತರ ನನಗೆ ಹೊಸ ತರಹದ ಬೆದರಿಕೆ ಕಾಲ್ ಬರಲು ಶುರುವಾಯಿತು ಫೇಸ್ಬುಕ್ ಗೆ ಸೇರಿಸಿದ್ದ ನಂಬರ್ ಗೆ ಕಾಲ್ ಬಂತು ಹೈ ಸರ್ ನೀವು ಆನ್ಲೈನ್ ನಲ್ಲಿ ನನ್ನ ಹೆಂಡತಿಯೊಂದಿಗೆ ವಿಡಿಯೋ ಕಾಲ್ ನಲ್ಲಿ ಏನು ಮಾಡ್ತಿದ್ರಿ ಎಂದು ಒಬ್ಬ ಕೇಳಿದ ನಾನೇನು ಮಾಡಿಲ್ಲಪ್ಪ ಅಂದೇ ಅದಕ್ಕೆ ಅವನು ನನ್ನತ್ತಿರ ಪ್ರೂಫ್ ಇದೆ ನಾನು ಪೊಲೀಸ್ ಸ್ಟೇಷನ್ ಹೋಗ್ತೀನಿ. ಅಂದ ನನಗೆ ಒಮ್ಮೆಲೇ ಭಯ ಆಯಿತು






ನಂಬರ್ ಯಾರು ಕೊಟ್ಟರು ಇವರಿಗೆ ಎಂದು ನಂತರ ಈ ತರ ದಂದೆ ಗೊತ್ತಿರುವುದರಿಂದ ಸುಮ್ಮನಾದೆ,ನಂತರ ಬಂದಿದ್ದು ಫೇಸ್ಬುಕ್ ಹುಡುಗಿಯೊಂದಿಗೆ ನಾನಿರುವಂತೆ ಮಾಡಿದ ಎ ಐ ಫೋಟೋ. ಜೊತೆಗೊಂದು ಬ್ಲಾಕ್ಮೇಲ್ ಮೆಸೇಜ್ ನನ್ನ ಹೆಂಡತಿಯೊಂದಿಗೆ ನೀನಿರುವ ಫೋಟೋ ಸೋಶಿಯಲ್ ಮೀಡಿಯಾದಲ್ಲಿ ಹಾಕ್ತೀನಿ ನೀನು ಈಗಲೇ 50,000 ಹಣ ಕೊಟ್ಟರೆ ಡಿಲೀಟ್ ಮಾಡ್ತೀನಿ, ಯಾವುದೇ ಬೇಕು ಯೋಚಿಸಿ ತಿಳಿಸು ಅಂತ ಹಣ ಕೊಟ್ಟರೆ ಕೇಸ್ ಮಾಡಲ್ಲ ಯಾವುದೇ ಮೀಡಿಯಾದಲ್ಲಿ ಬರಲ್ಲ ಎನ್ನುವ ಮೆಸೇಜ್

ನಾನು ಮುಗುಳು ನಗುತ್ತಾ ಈತರ ಮೋಸ ನನಗೆ ಗೊತ್ತಿದ್ದ ರಿಂದ ಹೊಸದೇನು ಕಾಣಿಸಲಿಲ್ಲ ಆದರೆ ಈತರ ಹೊಸದಾಗಿ ಫೇಸ್ಬುಕ್ ಬಳಸುವ ಯುವಕರು ಅಥವಾ ಕ್ಯೂರಿಯಸಿಟಿ ಇರುವ ಗಂಡಸರಿಗೆ ಬಗೆಬಗೆಯಲ್ಲಿ ಪೀಡಿಸಿ, ಕಾಡಿಸಿ ಯುವಕರ ಜೀವನ ಕೆಡಿಸಿ ಸಾಯಿಸಿದ ಎಷ್ಟೋ ಘಟನೆಗಳಿವೆ ಇಂತ ಆಧುನಿಕ ರಕ್ತ ಪಿಪಾಸುಗಳಿಗೆ ನನ್ನ ಧಿಕ್ಕಾರ...

| ಸೋಮೇಶ್ ಕಣದೂರ್
ಬೆಂಗಳೂರು
-7019543931

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,